ವಾರ್ಷಿಕ ಚಂದಾ ರೂ. ೩ ಬಿಡಿಪ್ರತಿ ೪ ಆಣೆ.

ಆಯುರ್ವೇದ

ಕನ್ನಡ ಮಾಸಪತ್ರಿಕೆ, ಹಿರಿಯಡಕ, ದ. ಕ.

ಸಂಪುಟ ೧] July ವಿರೋಧಿ ಸಂ। ಆಷಾಢ ಮಾಸ 1949. [ಸಂಚಿಕೆ ೧೦



ಶ್ರೀ। ವೈದ್ಯ ರಾ. ಕೃ. ಕುಲಕರ್ಣಿ,
ಜಿನರಾಳಕರ.

— ಆಯುರ್ವೇದಾಚಾರ್ಯ —

(ಪರಿಚಯಕ್ಕಾಗಿ ೧೩ನೇ ಪುಟ ನೋಡಿರಿ.)

— ವಿಷಯ ಸೂಚಿ: —

AYURVEDA

KANNADA MONTHLY, HIRIADKA, S. K.

ಮುದ್ರಕರು;
ಶ್ರೀ ರಾಧಾಕಾಂತ ಪ್ರೆಸ್,
ಮೂಲ್ಕಿ, ದ. ಕ.

ಆಯುರ್ವೇದ
ಕನ್ನಡ ಮಾಸಪತ್ರಿಕೆ.

ಪ್ರಕಾಶಕರು
ಕಾ. ರಾ. ಪುರಾಣಿಕ,
ಆಯುರ್ವೇದ ಆಫೀಸು,
ಹಿರಿಯಡಕ, ದ. ಕನ್ನಡ.

ಸಂಪಾದಕ ಮಂಡಳಿಯವರು.

೧. ಶ್ರೀಯುತ ಕಾ. ರಾ. ಪುರಾಣಿಕ. (ಪ್ರಧಾನ ಸಂಪಾದಕ.)

೨. " ವೈದ್ಯ ಪಿ. ಲಕ್ಷ್ಮೀನಾರಾಯಣ ನಾಯಕ್, ಅಧ್ಯಕ್ಷ, ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿ. ಉಡುಪಿ ತಾಲೂಕು ನಿಖಿಲ ಭಾರತೀಯ ವೈದ್ಯಸಂಘ ಮತ್ತು ಭುವನೇಂದ್ರ ಪ್ರಾಡಕ್ಟ್ಸ್, ಲಿ. ಇವರ ವೈದ್ಯಾಧಿಕಾರಿಗಳು.

೩. " ವೈದ್ಯಗುರು ಎಮ್. ಆರ್. ಭಟ್ಟ, ಬಿ. ಎಸ್. ಪಿ. ಇವರು ನಿಖಿಲ ಕರ್ನಾಟಕ ಆಯುರ್ವೇದ ಮಹಾ ಮಂಡಳದ ಅಧ್ಯಕ್ಷರಾಗಿದ್ದವರು. ಹಾಗೂ ನಿಖಿಲ ಭಾರತ ಆಯುರ್ವೇದ ಮಹಾ ಮಂಡಳದ ಸದಸ್ಯರಾಗಿದ್ದವರು. ಉಮಾ ಮೆಡಿಕಲ್ ಸರ್ವಿಸ್, ಜಟ್ಟು, ಬೆಂಗಳೂರು.

೪. " ಡಾ| ಎ. ವಿ. ಗದಗ, ಆಯುರ್ವೇದ ಗ್ರ್ಯಾಜುಯೇಟ್, ಎಕ್ಸ್ ಪ್ರಿನ್ಸಿಪಾಲ್ ಕರ್ನಾಟಕ ಆಯುರ್ವೇದ ವಿದ್ಯಾಪೀಠ, "ನಿಖಿಲ ಕರ್ನಾಟಕ ಆಯುರ್ವೇದ ಮಂಡಲದ ಪ್ರಧಾನ ಕಾರ್ಯದರ್ಶಿಗಳು" ಖಾಸಭಾಗ, ಬೆಳಗಾಂವ್.

೫. " ವೈದ್ಯ ರಾ. ಕೃ. ಕುಲಕರ್ಣಿ ಜಿನರಾಳಕರ್, ಆಯುರ್ವೇದಾಚಾರ್ಯ (ಎಸ್. ಬಿ. ವಿ.) ಆಯುರ್ವೇದ ವಿಶಾರದ ಜಿ. ಎ. ಎಮ್. ಎಸ್. ಕಛೇರಿಗಲ್ಲಿ, ಶಹಾಪುರ, ಬೆಳಗಾಂವ್.

೬. " ಆಯುರ್ವೇದ ವಿದ್ವಾನ್ ಪಂಡಿತ ಎಚ್. ಟಿ. ರಾಮಚಂದ್ರ ಆಚಾರ್ಯ, ಶ್ರೀ ಧನ್ವಂತರೀ ಭೇಷಜಾಲಯ, ಹೆಜಮಾಡಿ.

೭. ಶ್ರೀಮತಿ ಮಹೋಪಾಧ್ಯಾಯ ಡಾ| ಜಿ. ಸುಮತಿ ತಾರಾನಾಥ ಬಿ. ಎ. ಎಲ್. ಐ. ಆಯುರ್ವೇದ ವೈದ್ಯಗುರು. ಪ್ರೇಮಾ ಮೆಡಿಕಲ್ ಸರ್ವಿಸ್, ಬಸವನಗುಡಿ ಬೆಂಗಳೂರು.

೮. ಶ್ರೀಯುತ ವೈದ್ಯ ಗುಂಡಾಚಾರ್ಯ ಭೀಮಾಚಾರ್ಯ ಸವಣೂರು, ಎಲ್. ಎ. ಎಮ್. ಎಸ್. ಹುಬ್ಬಳ್ಳಿ. ಇವರು ಆರೋಗ್ಯ ಮಂದಿರದ ಸಂಪಾದಕರಾಗಿದ್ದು ಉತ್ತಮ ಲೇಖನಗಳನ್ನು ಬರೆದವರೂ, ಈ ಪತ್ರಿಕೆಯಲ್ಲಿಯೂ ಬರೆಯಲಿರುವವರೂ.

೯. " ಡಾ| ಎನ್. ಎಸ್. ಸುಬ್ರಹ್ಮಣ್ಯ ಶಾಸ್ತ್ರಿ, ಎಲ್. ಎಮ್. ಪಿ. ಆಯುರ್ವೇದ ವಿದ್ವಾನ್. ನ್ಯೂಯೋ ಫಾರ್ಮಸಿ, ಮೈಸೂರು.

೧೦. " ವೈದ್ಯ ಜಯರಾಮಾಚಾರ್ಯ ಮಳಗಿ, ಆಯುರ್ವೇದ ವಿದ್ವಾನ್, ಗದಗ.



ಶ್ರೀ ಶಿವಾನಂದ ವಿಜಯ ವೈದ್ಯಶಾಲಾ,

ಕೈಕಂಬ.

ಬಾಲಗ್ರಹಾಂತಕ ತೈಲಂ

ಚಿಕ್ಕ ಮಕ್ಕಳಿಗೆ ಈ ತೈಲವು ಅತ್ಯಂತ ಪ್ರಯೋಜನಕರವಾದದ್ದು. ಈ ಸಿದ್ಧೌಷಧವು ನಾಮಧೇಯಕ್ಕನುಗುಣವಾಗಿ ಮಕ್ಕಳ ಬಾಲಗ್ರಹಕ್ಕೆ ಯಮಸ್ವರೂಪವಾಗಿರುತ್ತದೆ. ಇದರ ಸೇವನೆಯಿಂದ ಮಕ್ಕಳ ಶರೀರದಲ್ಲಿ ಅಡಗಿರುವ ಬಾಲಗ್ರಹ ದೋಷವೆಲ್ಲವೂ ನಾಶವಾಗಿ ಸರ್ವದಾ ಆರೋಗ್ಯ ಸ್ಥಿತಿಯುಳ್ಳವರಾಗುತ್ತದೆ.

ಈ ತೈಲವನ್ನು ವಯೋನುಗುಣವಾಗಿ ಒಂದರಿಂದ ಹನ್ನೆರಡು ಬಿಂದುಗಳ ವರೆಗೆ. ಅಷ್ಟಮಿ, ಏಕಾದಶಿ, ಪೌರ್ಣಮಿ, ಅಮಾವಾಸ್ಯೆ ಮುಂತಾದ ದಿನಗಳಲ್ಲಿ ಸೇವಿಸಿದರೆ, ಬಾಲಗ್ರಹದಿಂದುಂಟಾಗುವ ಆಲಸ್ಯ, ತಾಪಜ್ವರ, ಗುಣಜ್ವರ, ಮಂದಜ್ವರ, ಹೊಟ್ಟೆಯುಬ್ಬರ, ನೆಗಡಿ, ಕೆಮ್ಮು, ದಮ್ಮು, ಉಬ್ಬಸ, ಬೋಧಕ್ಷಯ, ಕೈಕಾಲು ಸೆಳೆತ, ದೃಷ್ಟಿಸ್ತಂಭನ ಕೂಗುತ್ತಾ ಇರುವುದು ಮುಂತಾದ ರೋಗಗಳನ್ನು ನಿಶ್ಶೇಷವಾಗಿ ಇಲ್ಲದಂತೆ ಮಾಡುವುದು.

ಸೇವನಾ ಕ್ರಮ

ಮಗುವು ಹುಟ್ಟಿದಂದಿನಿಂದ, 6 ತಿಂಗಳ ವರೆಗೆ ಮೇಲೆ ನಿಶ್ಚಯಿಸಿದ್ದ ವಿಶೇಷ ದಿನಗಳಲ್ಲಿ ಸರ್ತಿಗೆ ಒಂದು ಬಿಂದುವಿನಂತೆ ಸೇವಿಸತಕ್ಕದ್ದು. ಆ ಮೇಲೆ ಮೂಗಿಗೆ ವಾಸನೆ ತೆಗೆದುಕೊಳ್ಳಿಸಿ, ಪಕ್ಕಗಳು, ಅಂಗೈ, ಅಂಗಾಲು, ನೆತ್ತಿ ಮುಂತಾದ ಕಡೆಗಳಲ್ಲಿ ಚೆನ್ನಾಗಿ ಉಜ್ಜುವುದರಿಂದ ಬೋಧ ಕಟ್ಟಿರುವ ಮಕ್ಕಳಿಗೆ ಎಚ್ಚರವುಂಟಾಗಿ ಬೇಗನೆ ಗುಣವಾಗುತ್ತದೆ. 7ನೇ ತಿಂಗಳಿಂದ 4 ವರ್ಷಗಳ ವರೆಗೆ ಮೂರು ಅಥವಾ ನಾಲ್ಕು ಬಿಂದು ಹೊಟ್ಟೆಗೆ ಕೊಡಬೇಕು. ಆ ಮೇಲೆ ಮೊದಲಿನಂತೆ ಮೂಗಿಗೆ ಮೂಸಿಸಿ ಎಲ್ಲಾ ಸಂದುಗಳಲ್ಲೂ ತಿಕ್ಕಬೇಕು. ಆ ಮೇಲೆ ಮಕ್ಕಳಿಗೆ ಬಾಲಾರಿಷ್ಟ ಕಾಲವಾದ 12ನೇ ವರ್ಷದ ವರೆಗೆ ಎಷ್ಟು ಪ್ರಾಯವೋ ಅಷ್ಟೇ ಬಿಂದುಗಳನ್ನು ಸೇವನೆಗೊಳಿಸತಕ್ಕದ್ದು.

ಬಾಲಗ್ರಹ ಜೋರಾಗಿ ಬೋಧ ತಪ್ಪುತ್ತಿರುವ ಮಕ್ಕಳಿಗೆ 5ರಿಂದ 8 ವರ್ಷದ ವರೆಗೆ ಒಂದೊಂದು ಬಿಂದು ತೈಲವನ್ನು ಮೂಗಿಗೆ ಬಿಟ್ಟು ಸಂದುಗಳಿಗೆ ತಿಕ್ಕಬೇಕು. 9ರಿಂದ 12 ವರ್ಷಗಳ ವರೆಗೆ ಮೂರು ನಾಲ್ಕು ಬಿಂದುಗಳನ್ನು ಮೂಗಿಗೆ ಬಿಟ್ಟು, ಸರ್ವಾಂಗಕ್ಕೂ ಹಚ್ಚಬೇಕು. ಅದಲ್ಲದೆ ಮೇಲೆ ಹೇಳಿದಂತೆ ಹೊಟ್ಟೆಗೂ ಕೊಡುತ್ತಾ ಬಂದರೆ ಬೇಗನೆ ಕ್ಷೇಮವಾಗುತ್ತದೆ.

1 ಔನ್ಸಿನ ಬಾಟ್ಲಿ 1ರ ರೂ. 0–10–0.
½ ಔನ್ಸಿನ ಬಾಟ್ಲಿ 1ರ ರೂ. 0– 6–0.

ಹೆಡ್ ಆಫೀಸು:- ರೈಲ್ವೆ ಸ್ಟೇಷನ್ ಬಳಿ ಪಯನೂರು. (N. Malabar)

ಪಿ. ಕೆ. ಶಣಾಕರ್ ವೈದ್ಯರಾಜ,
(Registered No 685)

ಬ್ರೇಂಚ್:- ಕೈಕಂಬ, P. O. ಕಿನ್ನಿಕಂಬಳ, ದಕ್ಷಿಣ ಕನ್ನಡ.

ವಿ. ಸೂ: ಮಕ್ಕಳಿಗೆ ಬೇಕಾಗುವ ಬಾಲಸಂಜೀವಿನೀ ಮಾತ್ರೆ ಮೊದಲಾದ ಸಕಲ ಆಯುರ್ವೇದ ಔಷಧಗಳು ನಮ್ಮಲ್ಲಿ ದೊರೆಯುತ್ತವೆ.

ಆಯುರ್ವೇದ

ಕನ್ನಡ ಮಾಸಪತ್ರಿಕೆ.

॥ ಶ್ರೀ ಧನ್ವಂತರಯೇ ನಮಃ ॥

July ವಿರೋಧಿ ಸಂ| ಆಷಾಢ ಮಾಸ. 1949.

ಸಂಪಾದಕೀಯ

ಈಗಾಗಲೇ ಹಲವಾರು ಪತ್ರಗಳು ರಾಜಕೀಯ ವಿಚಾರಗಳ ಪ್ರಶ್ನೆಗಳಿಂದಲೂ, ಸಂಪೂರ್ಣ ವಿಳಾಸ ಹಾಗೂ 0—2—0 ಟಪ್ಪಾಲು ಚೀಟು (ಸ್ಟಾಂಪು) ಗಳಿಲ್ಲದೆ ಸುಲಭ ಔಷಧ – ನಿಮ್ಮ ಪ್ರಶ್ನೆಗೆ ನಮ್ಮ ಅನುಭವದ ಕುರಿತಾಗಿಯೂ ಬಂದಿರುವವು. ಹಾಗೂ ಕೆಲವರು ಚಂದಾ ಹಣವನ್ನು ಮನಿಯಾರ್ಡರು ಮೂಲಕ ಕಳುಹಿಸಿ ವಿಳಾಸವನ್ನು ಪೂರ್ತಿಯಾಗಿ ತಿಳಿಸದೆ ಇರುವರು. ಸದ್ರಿ ಮನಿಯಾರ್ಡರ್ ಫಾರ್ಮಿನಲ್ಲಿದ್ದ ವಿಳಾಸವನ್ನು ನಾವು ಪಡೆದು ಕಳುಹಿಸಿದ ಪ್ರತಿಗಳು ಪರತು ಬಂದಿವೆ. ಮತ್ತೆ ಕೆಲವರು ಊರಿಂದೂರಿಗೆ ತಿರುಗುವವರಿದ್ದು ಬದಲಾದ ವಿಳಾಸವನ್ನೇ ತಿಳಿಸದ ಕಾರಣ ಹಾಗೂ ಪರತು ಬಂದದ್ದು ಇದೆ. ನಾವು ಈ ಬಗ್ಗೆ ಆದಷ್ಟು ಜಾಗರೂಕತೆ ವಹಿಸುತಿದ್ದರೂ ಹೀಗಾದ ತಪ್ಪಿಗೆ ಚಂದಾದಾರರೇ ಬಾಧ್ಯರೆಂಬುದನ್ನು ಮರೆಯಕೂಡದು. ಆದುದರಿಂದ ಇನ್ನು ಮುಂದೆ ಚಂದಾದಾರರಾಗತಕ್ಕವರು ತಮ್ಮ ಸಂಪೂರ್ಣ ಹೆಸರು, ವಿಳಾಸ, ಟಪ್ಪಾಲುಕಟ್ಟೆ, ದಾರಿ (via), ತಾಲೂಕು, ಜಿಲ್ಲಾ ವಗೈರೆ ಎಲ್ಲಾ ಮಾಹಿತಿಗಳನ್ನು ಕೊಡಬೇಕಾಗಿ ಸೂಚಿಸುತ್ತೇವೆ. ಅಲ್ಲದೇ—

ಈಗಾಗಲೇ ಹಲವರಿಗೆ ನಮ್ಮ ಸಂಚಿಕೆಗಳನ್ನು ಕಳುಹಿಸಿದ್ದು ಚಂದಾದಾರರಾಗುವಂತೆಯೂ ಕೇಳಿದ್ದುಂಟು. ಅವರು ಯಾವದೊಂದು ಉತ್ತರವನ್ನು ಬರೆದಿಲ್ಲ. ಆದ್ದರಿಂದ ಅವರ ಸಮ್ಮತಿಯಿರುವುದೆಂದು ಭಾವಿಸಿ ಮುಂದಿನ ಸಂಚಿಕೆಯನ್ನು ವಿ. ಪಿ. ಮೂಲಕ ರವಾನಿಸುತ್ತೇವೆ. ಮಾತ್ರ ಆ ಬಗ್ಗೆ ವಿ. ಪಿ. ಖರ್ಚು 0-4-0 ಯನ್ನು ಕೂಡಿಸಿಯೇ ಕಳುಹಿಸಬೇಕಾಗುವುದು. ಹೀಗೆ ವಿ. ಪಿ. ಮೂಲಕ ಬೇಡವೆಂದು ಬಯಸುವವರು ತಮ್ಮ ಚಂದಾ ಹಣವನ್ನು ಮನಿಯಾರ್ಡ್ಡರು ಮೂಲಕ ರವಾನಿಸಬೇಕೆಂದು ಕೋರುತ್ತೇವೆ. ಪತ್ರಿಕೆಯೇ ಬೇಡವೆಂದಾದವರು ದಯೆಯಿಟ್ಟು ಹಾಗೆ ಬರೆದು ತಿಳಿಸಬೇಕಾಗಿಯೂ ಕೋರುತ್ತೇವೆ !

ಈಗಾಗಲೇ ಬಂದ ಪತ್ರಗಳ ವಿಷಯದಲ್ಲಿ [illegible] [ಸ್ಟಾಂಪು] ಇಲ್ಲದ ಯಾವುದೇ ಪತ್ರಗಳಿಗೆ ಉತ್ತರ [illegible] ಕೊಡಲಾಗುವುದಿಲ್ಲವೆಂದು ಪುನಃ ತಿಳಿಸುತ್ತಿದ್ದೇವೆ. [illegible] ಬರೆಯುವ ಪುಸ್ತಿ ಮನಿ ಪತ್ರಗಳಲ್ಲಿ ಹೆಸರನ್ನು, ಪೂರ್ಣ ವಿಳಾಸ, [illegible] ಟಪಾಲು ಕಚೇರಿ [ಆಫೀಸು] ಇವುಗಳನ್ನು, ಜಿಲ್ಲೆ [illegible] ಪೂರ್ಣ ವಿಳಾಸಗಳನ್ನು ಕಳುಹಿಸಬೇಕು.

ನಮ್ಮ ಈ ಉದ್ದೇಶವೇ ಆದಿಯಿಂದ್ಯ ಹಾಗೂ ಆಯುರ್ವೇದದ ಅಭ್ಯುದಯಕ್ಕಾಗಿ ಮೀಸಲಿಟ್ಟಿದ್ದು ರಾಜಕೀಯ ವಿಚಾರಗಳಲ್ಲಿ ತಲೆಹಾಕುವುದರಿಂದ ಕೆಲವು ಮೇಲಿರುವವರ ಮಾತುಕತೆಗಳಲ್ಲಿ ನಮಗೆ ಇಷ್ಟವಿಲ್ಲ. ಹಾಗಾಗಿ ಈ ಸಾಪ್ತಾಹಿಕವು [ಆಯುರ್ವೇದ] ವಿಚಾರಗಳಲ್ಲಿ ಅಂಥಾ ತಿಳುವಳಿಕೆಯುಳ್ಳ ಬರಹಗಳು [illegible] ರಿಂದಲೇ ಏನೋ ಸ್ವಲ್ಪ ವಿಚಾರ ಭೇದ [illegible] ಸಾಧನೆಗಳಿಗಾಗಿ ಮಾಡಿದವುಗಳಾಗಿದ್ದು [illegible] ಕಟ್ಟುವುದಕ್ಕಿಂತ ಅವರನ್ನು ಸೌಜನ್ಯ ಹಾಗೂ ವಿಧಾಯಕ ರೀತಿಗಳಿಂದ ದಾರಿಗೆ ತರುವುದೇ ಲೇಸೆಂದು ಬಗೆಯುತ್ತೇವೆ.

ಆಯುರ್ವೇದದಲ್ಲಿಯ ತ್ರಿದೋಷಗಳು.

ಅವುಗಳಿಗೆ ಸ್ಥಾನವಾದ

ಮಾನವ ಶರೀರ ಮತ್ತು ಅದರ ನಿರೀಕ್ಷಣೆ.

ಲೇಖಕ:- ಆ। ವಿ। ಗುಂಡಾಚಾರ್ಯ, ಸವಣೂರು. ಎಲ್. ಎ. ಎಂ. ಎಸ್.

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಧಾತುಗಳೆಂದರೆ ಶರೀರ ಧಾರಣೆ ಮಾಡತಕ್ಕವುಗಳೆಲ್ಲಾ ಧಾತುಗಳು [ಧಾರಣಾತ್ ಧಾತವಃ] ಎಂಬ ಅರ್ಥದಲ್ಲಿ ವಾತ, ಪಿತ್ತ, ಶ್ಲೇಷ್ಮಗಳೂ, ರಸ ರಕ್ತಾದಿಗಳೂ, ಎರಡೂ ಧಾತುಗಳಾಗಿ ಗಣಿಸಲ್ಪಟ್ಟಿವೆ. ಇವೆರಡರಲ್ಲಿ ತ್ರಿಧಾತುಗಳನ್ನು ವಿಂಗಡಿಸಿ ಹೇಳುವುದಕ್ಕೆ ಅವುಗಳ ದೂಷಣ ಸ್ವಭಾವಕ್ಕೆ ಅನುಸಾರವಾಗಿ ದೋಷಗಳೆಂದೂ, ರಸರಕ್ತಾದಿಗಳಿಗೆ ಧಾತುಗಳೆಂದೂ ಬೇರೆ ಬೇರೆ ಹೆಸರುಗಳನ್ನು ಇಟ್ಟುಕೊಂಡಿರುವರು. ಶರೀರ ಧಾರಣೆಯನ್ನು ಎರಡೂ ಮಾಡುವವು. ಆದರೆ ಸ್ವತಃ ದುಷ್ಟವಾಗಿ ಶರೀರ ದೂಷಣೆ ಮಾಡತಕ್ಕ ಸಾಮರ್ಥ್ಯ ತ್ರಿಧಾತುಗಳೊಂದರಲ್ಲಿಯೇ ಇರುವುದರಿಂದ ಆಯುರ್ವೇದದಲ್ಲಿ ಇವುಗಳಿಗೆನೇ ತ್ರಿದೋಷಗಳೆಂದು ಹೆಸರು ಕೊಟ್ಟಿದ್ದಾರೆ.

ಈ ತ್ರಿದೋಷ ಸಿದ್ಧಾಂತದಿಂದ ಆಯುರ್ವೇದ ಶಾಸ್ತ್ರಕ್ಕೆ ಅನೇಕ ಲಾಭಗಳಿರುವವು. ಆಯುರ್ವೇದ ರೋಗನಿರ್ಣಯ ಮತ್ತು ಚಿಕಿತ್ಸೆ ಅಲ್ಪ ಖರ್ಚಿನಲ್ಲಿ ಹೆಚ್ಚು ಗುಣಕಾರಿಯಾಗಲು ಈ ತ್ರಿದೋಷ ಸಿದ್ಧಾಂತವೇ ಮೂಲವು. ಹೀಗಾಗಿ ಈ ಶಾಸ್ತ್ರವು ತೀರ ಬಡವನಿಂದ ಶ್ರೀಮಂತನವರೆಗೂ ಉಪಯುಕ್ತವಾದದ್ದಾಗಿರುವದು.

ಆಯುರ್ವೇದ ನಿದಾನ ಚಿಕಿತ್ಸೆಗಳು ಸುಲಭವಾಗಿರುವುದು ಈ ತ್ರಿದೋಷ ಸಿದ್ಧಾಂತದಿಂದಲೇ ಆಗಿರುವದು. ಹೆಚ್ಚು ಸಾಧನ ಸಾಮುಗ್ರಿಗಳ ಜೊಂಜಾಟವಿಲ್ಲ. ಪ್ರಸನ್ನವಾದ ಹದನಾದ ಬುದ್ಧಿ, ಒಳ್ಳೇ ಶಾಸ್ತ್ರಜ್ಞಾನ, ಇಂದ್ರಿಯುಗಳ ಪಾಟವ ಇಷ್ಟಿದ್ದರೆ ಸಾಕು. ಯಾವ ರೋಗವನ್ನಾದರೂ ನಿರ್ಣಯಮಾಡಿ, ಆಯುರ್ವೇದ ವೈದ್ಯನು ಚಿಕಿತ್ಸೆ ಮಾಡಬಲ್ಲನು.

ಈ ಪ್ರಕಾರವಾಗಿ ವ್ಯವಹಾರ ಕ್ಷಮತ್ವವುಳ್ಳ ಆಯುರ್ವೇದದ ಸಲುವಾಗಿ ನನ್ನ ಸ್ನೇಹಿತರಾದ ಒಬ್ಬ ಡಾಕ್ಟರರು "ವೈದ್ಯರೇ, ನಿಮ್ಮ ಆಯುರ್ವೇದ ಶಾಸ್ತ್ರದಲ್ಲಿ ತ್ರಿದೋಷ ಸಿದ್ಧಾಂತವನ್ನು ಬಿಟ್ಟರೆ ನಿಮ್ಮ ಶಾಸ್ತ್ರಕ್ಕೂ, ನಮ್ಮ ಶಾಸ್ತ್ರಕ್ಕೂ ಏನೂ ವ್ಯತ್ಯಾಸವಿಲ್ಲ. ಇಷ್ಟೇ ಅಲ್ಲ ನಿಮ್ಮ ಶಾಸ್ತ್ರಕಿಂತ ನಮ್ಮದು ಎಷ್ಟೋ ಮುಂದು

ನಂಬಿದೆ. ಆದ್ದರಿಂದ ತ್ರಿದೋಷ ಸಿದ್ಧಾಂತವನ್ನು [illegible]
ಅದು ಅಶಾಸ್ತ್ರೀಯವಾದದ್ದೆಂದು, ಪ್ರಯೋಗಗಳಿಂದ ಸಿದ್ಧವಾಗಿಲ್ಲ [illegible]
ಪ್ರಯೋಗಗಳಿಗೆ ಸಿದ್ಧವಾದರೆ ಅದನ್ನು [illegible]
ಅಲ್ಲದೇ ವೈದ್ಯ ಶಾಸ್ತ್ರದಲ್ಲಿ ಒಂದು ಕ್ರಾಂತಿಯೇ ಆಗಿ [illegible]
ಇದನ್ನು ತಿಳಿದುಕೊಳ್ಳುವುದು. ಇದರಿಂದ ಆಯುರ್ವೇದಕ್ಕೆ [illegible]
ಇದೆ! ಶಾಸ್ತ್ರೀಯ ಪ್ರಯೋಗಗಳ್ಳೆ ಸತ್ಯವೆಂದು ತಿಳಿದಿದ್ದರೆ ಆಯುರ್ವೇದದಲ್ಲಿ
ಏನೂ ಬೆಳ್ಳಗೆ ಇಲ್ಲ" ಎಂದು ಹೇಳಿದರು. ಇದನ್ನು ಕೇಳಿದ ಮೇಲೆ ನನ್ನ
ಮನಸ್ಸಿನಲ್ಲಿ ಸ್ಫುರಿಸಿದ್ದನ್ನು ಹೇಳಿದೆ. "ಡಾಕ್ಟರರೇ! ಆಯುರ್ವೇದದ ತ್ರಿದೋಷ
ಸಿದ್ಧಾಂತವನ್ನು ನೀವು ನಿಮ್ಮ ಮಾತಿನಂತೆ ಶಾಸ್ತ್ರೀಯವಾದುದೆಂದು ಪ್ರಯೋಗ
ಗಳಿಂದ ಸಿದ್ಧಮಾಡಿ ನೋಡಿರಿ. ನೀವು ಕೇಳಿದ ಕೊನೆಯ ಮಾತಿಗೆ ಮಾತ್ರ ನಾನು
ಸಿದ್ಧನಿಲ್ಲ. ನಿಮ್ಮ ಪ್ರಯೋಗಗಳ್ಳೆ ಸಿದ್ಧವಾಗದಿದ್ದರೆ ಅಶಾಸ್ತ್ರೀಯವೆಂದು ಹೇಗೆ
ಕರೆಯುವಿರಿ? ಎಲ್ಲಿಯ ವರೆಗೂ ಅದು ಕಾರ್ಯತಃ ವ್ಯವಹಾರ ಕ್ಷೇತ್ರದಲ್ಲಿ ಸಿ-
ದ್ಧಿರುವುದೋ ಪ್ರಯೋಗಗಳಿಂದ ಫಲಕಾರಿಯಾಗಿರುವುದೋ ಅಲ್ಲಿಯ ವರೆಗೆ
ನಾನೇನು ಅದನ್ನು ಬಿಡಲು ಸಾಧ್ಯವಿಲ್ಲ. ನನ್ನ ಅನುಭವದಂತೆ ಸಂಪ್ರದಾಯ ಆಯು-
ರ್ವೇದ ಜ್ಞಾನಿಗಳೂ ನನ್ನ ತಿಳಿಯುದೂ ನಾನೂ ಇವತ್ತಿನ ವರೆಗೆ ಆ ಸಿದ್ಧಾಂತ-
ಕ್ಕನುಸಾರವಾಗಿ ಚಿಕಿತ್ಸೆಯನ್ನು ಫಲಕಾರಿಯಾಗಿ ಮಾಡುತ್ತ ಬಂದಿರುವುದರಿಂ-
ದಲೂ ವ್ಯವಹಾರದಲ್ಲಿ ಅದರ ಸತ್ಯತೆಯ ಅನುಭವವನ್ನು [illegible]
ಬಂದಿರುವುದರಿಂದಲೂ ಅದನ್ನು ಬಿಡುವುದು ಹೇಗೆ? ಅದನ್ನು ಅಶಾಸ್ತ್ರೀಯವೆಂದು
ಕರೆಯುವುದಾದರೂ ಹೇಗೆ? ಎಂದಿಗೆ ತ್ರಿದೋಷ ಸಿದ್ಧಾಂತದಿಂದ ಚಿಕಿತ್ಸೆಯನ್ನು
ಮಾಡಿದರೆ ರೋಗಿಯು ಬದುಕುವುದಿಲ್ಲವೋ ಅಥವಾ ರೋಗಿಗಳಿಗೆ ಅಪಾಯ-
ವಿದೆ ಎಂಬುದು ನಮ್ಮ ಅನುಭವಕ್ಕೆ ಬರುವುದೋ ಅಲ್ಲಿಯ ವರೆಗೆ ನಾನಾಗಲಿ
ಇತರ ವೈದ್ಯರಾಗಲಿ ಅದನ್ನು ಬಿಡುವುದು ಸಾಧ್ಯವಿಲ್ಲ. ಈಗ ನೀವು ಉಪಯೋಗಿ-
ಸುವ ಆಯುರ್ವೇದ ಔಷಧಗಳನ್ನು ನಿಮ್ಮ ಪದ್ಧತಿಯಿಂದ ಕೊಟ್ಟರೂ ಅವು
ಒಳ್ಳೇ ಗುಣಕಾರಿಗಳಾಗಿ ಪರಿಣಾಮ ಮಾಡುವವು. ಇದು ನಿಮ್ಮ ಅನುಭವಕ್ಕೆ
ಬಂದಿರುವುದು. ಅಂದ ಮೇಲೆ ಈ ಔಷಧಗಳನ್ನು ಇಷ್ಟು ಪ್ರಭಾವಶಾಲಿಗಳನ್ನಾಗಿ
ತಯಾರಿಸಬೇಕಾದರೆ ಆ ಶಾಸ್ತ್ರಕ್ಕೊಂದು ತತ್ವ ಪ್ರಣಾಲಿ ಇರಬೇಕಲ್ಲವೇ?
ಆಯುರ್ವೇದದ ಚಿಕಿತ್ಸೆಯು ತ್ರಿದೋಷ ಸಿದ್ಧಾಂತಗಳಂತೆ ಇನ್ನು ಬೇರೆ ಸಿದ್ಧಾಂತ
ಗಳಿಂದ ಕೂಡಿದ್ದಾಗಿರುವದು. ಅವನ್ನೆಲ್ಲಾ ತಿಳಿದುಕೊಂಡು ಆಯುರ್ವೇದದ ಔಷಧ
ಗಳ ಉಪಯೋಗ ಮಾಡುವ ಯಶಸ್ವೀ ವೈದ್ಯರು ಇನ್ನೂ ಇರುವರು. ನಿಮ್ಮ
ಮಾತಿಗೆ ಆ ವೈದ್ಯರೂ ಇನ್ನೂ ಹೆಚ್ಚು ಸ್ಪಷ್ಟವಾದ ಉತ್ತರ ಕೊಡಬಲ್ಲರು" ಎಂದು
ಹೇಳಿದೆ. ಅದಕ್ಕೆ ಅವರು ಮುಂದೆ ಮಾತೇ ಆಡಲಿಲ್ಲ.

ಈ ಮಾತಿನ ಮಥಿತಾರ್ಥವಿಷ್ಟೇ. ಈಗಿನ ಡಾಕ್ಟರ ಜನರಿಗೂ ಆಯುರ್ವೇದದ ಮೇಲೆ ಆಶೆಹುಟ್ಟಿದೆ. ಯಾಕೆ? ಉಪಯೋಗಿಸಿ ಲಾಭಪಡೆಯುತ್ತಿದ್ದಾರೆ. ಅದರಲ್ಲಿಯ ಔಷಧಗಳೂ ಗುಣಕಾರಿಯಾಗಿವೆ. ಆದರೆ ತ್ರಿದೋಷ ಸಿದ್ಧಾಂತವನ್ನು ಮಾತ್ರ ಆಯುರ್ವೇದ ಶಾಸ್ತ್ರಕ್ಕನುಸಾರವಾಗಿ ಒಪ್ಪಲಾರರು! ಆಯುರ್ವೇದವು ಅಶಾಸ್ತ್ರಿಯುವಿದೆ! ಮತ್ತು ಆ ಸಿದ್ಧಾಂತಗಳು ತಮ್ಮ ಶಾಸ್ತ್ರದ ಪದ್ಧತಿಗಳ ಸಾಧನ ಸಾಮುಗ್ರಿಗಳಿಂದ ಸಿದ್ಧವಾಗಬೇಕಂತೆ! ಇಲ್ಲದಿದ್ದರೆ ಆಯುರ್ವೇದದಲ್ಲಿ ಹೆಚ್ಚಿಗೆ ಏನೂ ತಥ್ಯವಿಲ್ಲ! ಎಂಥ ವಿಸಂಗತ ವಾದವಾಗಿರುವದೆಂಬದನ್ನು ವಾಚಕರೇ ಊಹಿಸಬೇಕು.

ಅಲೋಪಥಿ ಸಿದ್ಧಾಂತಗಳನ್ನು ಆಯುರ್ವೇದ ಶಾಸ್ತ್ರ ತತ್ವಗಳಿಂದ ಸಿದ್ಧ ಮಾಡಿ ಬಿಡಿಸಬಹುದೇ? ಎಂಬುದನ್ನು ಡಾಕ್ಟರರು ಒಮ್ಮೆ ವಿಚಾರಮಾಡಬೇಕು.

ಆಯುರ್ವೇದ ವಿಚಾರವನ್ನು ತಿಳಿದುಕೊಳ್ಳಬೇಕಾದರೆ ನಾವು ನಮ್ಮ ದೃಷ್ಟಿಯನ್ನು ಒಂದುಕಡೆ ಸ್ಥಿರ ಮಾಡಿಕೊಳ್ಳಬೇಕಾಗುವುದು. ಆಯುರ್ವೇದ ತತ್ವಗಳನ್ನೂ ಸಿದ್ಧಾಂತಗಳನ್ನೂ ಆಯುರ್ವೇದ ಶಾಸ್ತ್ರದೃಷ್ಟಿಯಿಂದಲೇ ವಿಚಾರಿಸಬೇಕಲ್ಲದೆ ಇತರ ಶಾಸ್ತ್ರಗಳ ವತಿ ನಮಗೆ ಬೇಕಾಗಿಲ್ಲ. ಇತರ ಶಾಸ್ತ್ರಗಳ ತತ್ವಗಳ ವರೆಗೆ ಹತ್ತಿ ಅದು ಸತ್ಯ ಸಿದ್ಧಾಂತವಾಗಿ ಹೊರಟರೆ ಹೊರಡಲಿ. ಅದಕ್ಕೆ ನಮ್ಮ ಆಕ್ಷೇಪಣೆ ಏನೂ ಇಲ್ಲ. ಅದನ್ನು ಆಯುರ್ವೇದ ವಿಕಾಸಕ್ಕಾಗಿ ಬಳಿಸಿಕೊಳ್ಳುವಾ, ಆದರೆ ಅದರಿಂದ ಆಯುರ್ವೇದವು ಅಸತ್ಯವೆಂದು ಸಿದ್ಧಾಂತವಾಗಿ ಹೊರಟರೆ ಅದನ್ನು ಸ್ವೀಕರಿಸಲು ನಾವು ತಯಾರಿಲ್ಲ. ಹೀಗೆ ಮಾಡಿದರೆ ಆಯುರ್ವೇದ ಸಂಶೋಧನೆಯು ಪರಿಹಾಸ್ಯ ಮಾಡಿದಂತಾಗುವುದು.

ಇತ್ತೀಚೆಗೆ ಜೀವನ ಶಾಸ್ತ್ರ ಸಮಸ್ಯೆ ಬಗೆಹರಿಸಲು ಪಾಶ್ಚಾತ್ಯ ದೇಶಗಳಲ್ಲಿ ಅನೇಕ ಹೊಸ ಪ್ರಯೋಗಗಳನ್ನು ನಡೆಸಿದ್ದಾರೆ. ರಾಕ್ ಫೆಲರ್ ಇನ್ಸ್ಟಿಟ್ಯೂಟ ಫಾರ್ ಮೆಡಿಕಲ್ ರಿಸರ್ಚ ಎಂಬ ನ್ಯೂಯಾರ್ಕದಲ್ಲಿಯ ಸಂಸ್ಥೆಯವರು ಸಜೀವ ಶರೀರದಲ್ಲಿ ನಡೆಯುವ ವ್ಯಾಪಾರವನ್ನೇ ವಿಜ್ಞಾನ ಸಾಧನಗಳಿಂದ ಕಂಡುಹಿಡಿಯುವ ಪ್ರಯತ್ನ ನಡೆಸಿದ್ದಾರೆ. ಅದರಲ್ಲಿ ಅನೇಕ ಹೊಸ ಸಂಗತಿಗಳು ಕಂಡುಬಂದಿವೆ. ಅದರ ಮಾದರಿ ಹೀಗೆ. ಜೀವಶ್ಶರೀರದಲ್ಲಿ ಚೇತನಾಣುವನ್ನು ಬೃಹದ್ದರ್ಶಕ ಯಂತ್ರದಿಂದ ದೊಡ್ಡದಾಗಿ ಮಾಡಿ ಅದರ ಚಲಚಿತ್ರಪಟವನ್ನು ತೆಗೆದುಕೊಳ್ಳುವರು. ಆ ಚಿತ್ರಪಟವನ್ನು ದೊಡ್ಡದಾಗಿ ಪರದೆಯ ಮೇಲೆ ಮೂಡಿಸಿ ನೋಡುವುದರಿಂದ ಅದರಲ್ಲಿಯ ವ್ಯಾಪಾರಗಳು ಕಂಡುಬರುವವು.

ಈ ಉಪಾಯದಿಂದ ಇದ್ದ ಪರಿಸ್ಥಿತಿಯ ಜ್ಞಾನ ಸರಿಯಾಗಿ ಆಗಬಹುದೇ ವಿನಃ ಇದೇ ಏಕೇ? ಎಂಬುದು ಈ ಸಾಧನಗಳಿಂದ ಆಗುವುದು ಶಕ್ಯವಿಲ್ಲ ಅದಕ್ಕೆ ತತ್ವಶಾಸ್ತ್ರಜ್ಞಾನಬೇಕು. ತತ್ವ ಶಾಸ್ತ್ರಜ್ಞಾನವು ಕಾರ್ಯಕಾರಣ ಭಾವವನ್ನು

ತಿಳಿಸುತ್ತದೆ. ಈ ವಿಷಯವನ್ನು ಆಯುರ್ವೇದ [illegible] ವಿಜ್ಞಾನ ಶಾಸ್ತ್ರವನ್ನು ತತ್ವ ಶಾಸ್ತ್ರವನ್ನು ಬಿಟ್ಟಿರಲಾರದು. [illegible] ತತ್ವ ಶಾಸ್ತ್ರವನ್ನು, [illegible] ವಿಜ್ಞಾನ ಶಾಸ್ತ್ರವು ಇಂದ್ರಿಯ ಗ್ರಾಹ್ಯವಾದುದು, ತತ್ವಶಾಸ್ತ್ರವು ಇಂದ್ರಿಯಾತೀತ ವಾದುದು, ವಿಜ್ಞಾನ ಶಾಸ್ತ್ರವು ಪರೀಕ್ಷೆ ಮತ್ತು ಪ್ರಯೋಗ ಪ್ರಧಾನವಾದುದು. ತತ್ವಶಾಸ್ತ್ರವು ಕಾರ್ಯಕಾರಣದ ಪ್ರತಿಪಾದನೆಯನ್ನು ಮಾಡುತ್ತದೆ. ವಿಜ್ಞಾನ ಶಾಸ್ತ್ರವು ವಿವೇಚನಾತ್ಮಕವಿದ್ದರೆ ತತ್ವಶಾಸ್ತ್ರವು ಸಂಕಲನಾತ್ಮಕವಾಗಿರುವುದು.

ಆದ್ದರಿಂದ ಜೀವನ ವ್ಯಾಪಾರ ಸಮಸ್ಯೆಯು ಅರ್ಥವಾಗಬೇಕಾದರೆ ಎರಡು ಶಾಸ್ತ್ರ ಗಳ ಪರಸ್ಪರ ಸಹಕಾರಿತ್ವವು ಬೇಕು. ಒಂದರಿಂದೊಂದು ಅವು ಪೂರ್ಣವಾಗುವವು.

ಆಯುರ್ವೇದವನ್ನು ಆಯುರ್ವೇದ ದೃಷ್ಟಿಯಿಂದಲೇ ನೋಡಬೇಕು ಎಂದು ನಾವು ಹೇಳಿದ್ದು ಇದೇ ಪದ್ಧತಿಯಲ್ಲಿ ನೋಡಲು. ಆಯುರ್ವೇದ ತತ್ವ ಶಾಸ್ತ್ರವನ್ನರಿತು ಆ ಮೇಲೆ ವಿಜ್ಞಾನ ಶಾಸ್ತ್ರ ಪ್ರಯೋಗಗಳು ಅದಕ್ಕೆ ಸಹಾಯಕ ವಾಗುವಂತೆ ನೋಡಬೇಕು.

ಮನುಷ್ಯ ಶರೀರದಲ್ಲಿ ಅಣುಪರಮಾಣುಗಳು ಅವಯವಗಳಲ್ಲಿಯ ಕಾರ್ಯ ಹೇಗೆ ನಡೆಯುವವೆಂಬುದನ್ನು ಮಾತ್ರ ತಿಳಿದುಕೊಂಡಮಾತ್ರಕ್ಕೆ ಜೀವನ ವ್ಯಾಪಾರ ವಿಜ್ಞಾನವು ಪೂರ್ತಿಯಾಗಲಿಲ್ಲ. ಅದನ್ನು ನಾವು ಒಂದು ಅಂಕದಿಂದ ಕರೆಯಬಹುದು. ವ್ಯಷ್ಟಿ ಮತ್ತು ಸಮಷ್ಟಿ ಎರಡೂ ದೃಷ್ಟಿಯಿಂದ ಜೀವನ ವ್ಯಾಪಾರ ವಿಚಾರ ಮಾಡಬೇಕು. ಹೀಗೆ ವಿಚಾರಮಾಡುವಾಗ ಶರೀರ ಒಂದು ದ್ರವ್ಯವೇ ಆಗುವುದು. ಶರೀರದಲ್ಲಿ ವಾಸ್ತವವಾಗಿರುವ ಅಂತಃಕರಣ ಚೈತನ್ಯ ಗಳೇ ಅದರ ಕಾರ್ಯಕಾರಿ ಶಕ್ತಿಗಳು. ಶರೀರದಲ್ಲಿ ನಡೆಯುವ ಈ ಶಕ್ತಿಗಳ ಕಾರ್ಯ ಪ್ರವಾಹದ ಸೆಳವಿನಲ್ಲಿಯೇ ಶರೀರ ಅಂಗಗಳೂ ಉಪಾಂಗಗಳೂ ಧಾತು ಗಳೂ ಧಾತುಸ್ಥ ಸಚೇತನ ಪರಮಾಣುಗಳೂ ಕಾರ್ಯ ಮಾಡುವವು. ಆದ್ದರಿಂದ ಜೀವನ ವ್ಯಾಪಾರಜ್ಞಾನ ಸರಿಯಾಗಿ ಆಗಬೇಕಾದರೆ ಈ ದೃಷ್ಟಿಯಿಂದ ನಾವು ನೋಡಬೇಕು. ಈ ತ್ರಿದೋಷ ವಿಚಾರವನ್ನು ಮುಂದೆ ಬರೆಯುವಾಗ ಇದೇ ದೃಷ್ಟಿಯಿಂದ ವಿಚಾರಮಾಡಿ ಬರೆದದ್ದಾಗಿದೆ. ಮತ್ತು ಈ ಲೇಖನದಿಂದ ತ್ರಿದೋಷ ಗಳೆಂದರೆ ಏನು? ಎಂಬುದರ ವಿಚಾರವು ಈಗ ತಾನು ತಿಳಿದುಕೊಂಡಿದ್ದಕ್ಕಿಂತ ಸ್ವಲ್ಪ ಮಟ್ಟಿಗಾದರೂ ಹೆಚ್ಚು ಸ್ಪಷ್ಟವಾದ ನಿಶ್ಚಿತ ಜ್ಞಾನಕೊಟ್ಟರೆ ಈ ಲೇಖಕನ ಶ್ರಮವು ಸಾರ್ಥಕವಾಯಿತೆಂದು ಆಶಿಸುವೆ.

ಚೋಪ್ರಾ ಸಮಿತಿಯ ವರದಿ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಸೂಚನೆಗಳ ಸಾರಾಂಶ:—

(ದಿಲ್ಲಿ ಆಯುರ್ವೇದ ಪತ್ರಿಕೆಯ ಆಧಾರದಿಂದ)

ಸರಕಾರಿ ಆಡಳಿತೆ

ದೇಶೀಯ ವೈದ್ಯಕೀಯ ವಿಚಾರದ ವಿದ್ಯಾಭ್ಯಾಸವನ್ನು ವಿಶಾಲ ಧೋರಣೆಯಿಂದ ಕ್ರಮಗೊಳಿಸಲು ಸರಕಾರಕ್ಕೆ ತಕ್ಕ ಸಮಯವು ಪ್ರಾಪ್ತವಾಗಿರುವುದಾಗಿ ನಮ್ಮ ಅಭಿಪ್ರಾಯ. ಈ ಬಗ್ಗೆ ಸರಕಾರವು ಪ್ರತ್ಯೇಕ ಒಂದು ವಿಶೇಷ ಸಮಿತಿಯನ್ನೇರ್ಪಡಿಸಿ ವೈದ್ಯಕೀಯ ವಿದ್ಯಾಭ್ಯಾಸ ವೈದ್ಯರ ರೆಜಿಸ್ಟ್ರೇಶನ್ ಮುಂತಾದುವುಗಳನ್ನು ಇಡೀ ದೇಶಕ್ಕೆ ಸಮನ್ವಯವಾಗುವಂತೆಯೂ ಕೇಂದ್ರ ಸರಕಾರದವರು ಮಾಡಿದ ಆಕ್ಟಿನನ್ವಯ ದೇಶೀಯ ಸಮಸ್ತ ಗಣನೀಯ ಪದ್ಧತಿಯ ಎಲ್ಲಾ ವೈದ್ಯರಿಗೂ ಒಂದೇ ರೆಜಿಸ್ಟರ್ ಇಡುವ ಕ್ರಮವನ್ನು ಜ್ಯಾರಿಗೆ ತರುವುದು ಯೋಗ್ಯವಾಗಿದೆ.

ಆರೋಗ್ಯ ಮತ್ತು ಚಿಕಿತ್ಸಾ ಸಮಸ್ಯೆಗಳನ್ನು ರಾಷ್ಟ್ರೀಯ ಭಾವನೆಯಿಂದ ಬಗೆಹರಿಸಬೇಕಾದರೆ ದೇಶದಲ್ಲಿರುವ ಎಲ್ಲಾ ಬಗೆಯ ಪ್ರಾಮುಖ್ಯ ಪದ್ಧತಿಗಳ ಬಗ್ಗೆ ಪ್ರತ್ಯೇಕ ಪ್ರತ್ಯೇಕವಾಗಿ ಕ್ರಮಗಳನ್ನೇರ್ಪಡಿಸುವ ಬದಲಿಗೆ ಎಲ್ಲಾ ಪದ್ಧತಿಗಳಿಗೂ ಒಂದೇ ರೀತಿಯಲ್ಲಿ ವಿಶಾಲ ದೃಷ್ಟಿಯ ಕಾನೂನು ಮಾಡಿ ಕ್ರಮಪಡಿಸುವುದು ಹಿತವಾಗಿದೆ.

ಈ ಬಗ್ಗೆ ಕಾನೂನು ಕಟ್ಟಳೆಗಳನ್ನು ಮಾಡುವಾಗ ಕೆಳಗೆ ಸೂಚಿಸಿದ ಪ್ರಧಾನ ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

[1] ಎಲ್ಲಾ ಪ್ರಾಮುಖ್ಯ ಪದ್ಧತಿಗಳ ವಿದ್ಯಾಭ್ಯಾಸ, ಶಿಕ್ಷಣಕ್ರಮ, ಚಿಕಿತ್ಸಾಲಯಗಳ ಮೇಲ್ವಿಚಾರಣೆಯ ಬಗ್ಗೆ ಆಸ್ಪದ ಕಲ್ಪಿಸಿಕೊಡಬೇಕು.

[2] ಎಲ್ಲಾ ಪ್ರಾಮುಖ್ಯ ಪದ್ಧತಿಗಳ ವೈದ್ಯರ ರೆಜಿಸ್ಟ್ರೇಶನ್.

[3] ಉದ್ಯೋಗ ವ್ಯವಹಾರದ ಶಿಸ್ತು.

[4] ಸಾರ್ವಜನಿಕ ಆರೋಗ್ಯ, ಚಿಕಿತ್ಸಾ ವಿಷಯಗಳ ಸಮಾಲೋಚನೆಯ ಬಗ್ಗೆ ಸಲಹಾ ಮಂಡಳಿಯ ವ್ಯವಸ್ಥೆ.

ಮೇಲಿನ ಆವಶ್ಯಕತೆಗಳನ್ನು ವಾಸ್ತವಿಕ ಕಾರ್ಯಾಚರಣೆಗೆ ತರುವುದನ್ನು ರಾಷ್ಟ್ರೀಯ ವೈದ್ಯ ಮಂಡಲದ (National Medical Board) ಮೂಲಕ ಮಾಡಬೇಕು. ಈ ಮಂಡಲದಲ್ಲಿ ದಿ ಇಂಡಿಯನ್ ಮೆಡಿಕಲ್ ಕೌನ್ಸಿಲು

(The Indian Medical Council) ಮತ್ತು [illegible] ಕೌನ್ಸಿಲ್ (The Council of Indian Medicine) [illegible] ಗಳಿರಬೇಕು. ಒಂದು [illegible] ದೇಶೀಯ ರೀತಿಯ [illegible] ಪ್ರಾಂತಿಕ ಮತ್ತು ಪ್ರಾದೇಶಿಕ ಶಾಖೆಗಳು (Provincial & Regional) [illegible] ಲದ ಅಂಗಗಳಾಗಿರಬೇಕು. ಪ್ರಾಂತಿಕ ವ ಪ್ರಾದೇಶಿಕ [illegible] ಯಾ ಸಂಸ್ಥೆ, ಶಿಕ್ಷಣಾಲಯಗಳ [illegible] ತೀರ್ಮಾನದ ಅಧಿಕಾರವು ಮಂಡಳಿಯದ್ದಾಗಿರಬೇಕು. [illegible] ಡುವ ಪ್ರತಿನಿಧಿಗಳಲ್ಲಿ ಶಿಕ್ಷಣಾಲಯದ ಯೋಗ್ಯತೆ ಹೊಂದಿದವರ (Institution-ally qualified) ಸಂಖ್ಯೆಯು ಸಾಮಾನ್ಯ ಯೋಗ್ಯತೆಯುಳ್ಳವರ ಸಂಖ್ಯೆಗಿಂತ ಹೆಚ್ಚಾಗಿರಬೇಕು.

ಪಾಶ್ಚಾತ್ಯ ಮತ್ತು ದೇಶೀಯ ಪದ್ಧತಿಯ ಎಲ್ಲಾ ವೈದ್ಯರಿಗೂ ರಿಜಿಸ್ಟ್ರೇಷನ್ ಕಡ್ಡಾಯವಾಗಿರಬೇಕು. ಆಗ ಮಾತ್ರ ಅಂಗೀಕಾರವಿಲ್ಲದ [illegible] ಹುಟ್ಟಿದಗಿ [illegible] ಜನರಿಗಾಗುವ ಮೋಸದ [illegible] ತಪ್ಪಿಸಬಹುದು.

ತತ್ಕಾಲಕ್ಕೆ ದೇಶೀಯ ವೈದ್ಯರ ಮತ್ತು ಪಾಶ್ಚಾತ್ಯ ರೀತಿಯ ವೈದ್ಯರ ರಿಜಿಸ್ಟರ್ ಬೇರೆ ಬೇರೆಯಾಗಿರಬೇಕು. ವೈದ್ಯಕೀಯ ವಿದ್ಯಾಲಯಗಳಲ್ಲಿ ಶಿಕ್ಷಣವು ಸುಧಾರಣೆ ಹೊಂದಿ ಇತರ ರೀತಿಯ ಯೋಗ್ಯತೆಯು ಪ್ರತ್ಯೇಕ [illegible] ಎರಡರ ಬದಲಾಗಿ ಒಂದೇ ರಿಜಿಸ್ಟರ್ ಇಡುವ [illegible]

ಅಧಿಕೃತ ಯೋಗ್ಯತೆ ಇಲ್ಲದಿರುವವರಿಂದ ಸಾಮಾನ್ಯವಾಗಿ [illegible] ಮತ್ತು ಹಳೇ [illegible] ಅಧಿಕೃತ ಯೋಗ್ಯತೆ ಇಲ್ಲದವರಿಗೂ ರಿಜಿಸ್ಟರಿನಲ್ಲಿ ಭಿನ್ನತೆ ತೋರಿಸಬಾರದು. ಆದರೆ ಮುಂದಕ್ಕೆ ಪ್ರತಿನಿಧಿಗಳನ್ನು ಆರಿಸುವಾಗ ಮಾತ್ರ ಬೇರೆ ಬೇರೆ ಚುನಾವಣೆಯಾಗತಕ್ಕದ್ದು.

ಸಂಶೋಧನೆ (Research)

ವೈದ್ಯಕೀಯ ಕಲೆ, ವಿಜ್ಞಾನಗಳಿಗೆ ಇನ್ನೂ ಅಧಿಕ ರೀತಿಯ [illegible] ಗುವಂತೆ ದೇಶೀಯ ವೈದ್ಯಕೀಯ ಪದ್ಧತಿಯಲ್ಲಿ ತಕ್ಕ ಸಂಶೋಧನಾ ಕೆಲಸವನ್ನು ಬೇಗನೆ ಪ್ರಾರಂಭಿಸುವುದು ಅತ್ಯಾವಶ್ಯಕವಾಗಿದೆ. ಇದರಿಂದ ಹಲವು ಶತಮಾನಗಳಿಂದ ಪ್ರಗತಿಶೂನ್ಯವಾದ ಈ ಪದ್ಧತಿಯು ಚೇತನಗೊಂಡು ಜನತೆಯ ಮತ್ತು ಜಗತ್ತಿನ ಏಳಿಗೆಗೆ ಸಹಾಯವಾದಂತಾಗುವುದು. ಯೋಗ್ಯವಾದ ಸಂಶೋಧನಾ ಕಾರ್ಯಕ್ರಮವು ಕಾರ್ಯರೂಪಕ್ಕೆ ಬರುವಂತೆ ಎಲ್ಲಾ ಭಾಗದವರಿಂದಲೂ

ಒತ್ತಾಸೆ ಇರುವುದು. ಸಂಶೋಧನೆಯು ಎರಡು ಬಗೆಯ ಉದ್ದೇಶಗಳನ್ನು ಸಾಧಿಸುವಂತಾಗಬೇಕು.

1) ಶತಮಾನಗಳಿಂದ ಜನರಲ್ಲಿ ಬೇರೂರಿರುವ ತಾತ್ಸಾರ ಭಾವನೆಯುಡಗುವಂತೆ ಅನುಮಾನಾಸ್ಪದ ವಿಷಯಗಳನ್ನು ತೆಗೆದು ಹಾಕಿ ಆಧುನಿಕ ವಿಚಾರಯುಕ್ತ ಜನರ ಮನಸ್ಸಿಗೆ ಒಪ್ಪುವ ಕಲೆ ಮತ್ತು ವಿಜ್ಞಾನವಾಗಬೇಕು.

2) ನಮ್ಮ ದೇಶದ ಜನತಾ ಜೀವನಕ್ಕೆ ತಕ್ಕುದಾದ ದೇಶೀಯ ಮತ್ತು ಪಾಶ್ಚಾತ್ಯ ಪದ್ಧತಿಗಳ ಸಂಘಟಿತ ಸಂಯೋಜನೆ, ಶಿಕ್ಷಣ ಮತ್ತು ಚಿಕಿತ್ಸಾ ಕ್ರಮಗಳನ್ನು ತಯಾರಿಸಬೇಕು.

ಸಂಶೋಧನಾ ವಿಷಯಗಳು:-

1) ಆಯುರ್ವೇದ ಮತ್ತು ಯುನಾನಿ ರೀತಿಗಳ ಜೀವಾಳವಾಗಿರುವ ತತ್ವ ನಿರೂಪಣೆಗಳು.
2) ಸಾಹಿತ್ಯ.
3) ಚಿಕಿತ್ಸಾ ಕ್ರಮ.
4) ಗಿಡಮೂಲಿಕೆ, ಕಚ್ಚಾ ಸಾಮಾನುಗಳು, ಯೋಗಗಳು.
5) ಆಹಾರ, ಪೋಷಣೆ (Diet & Nutrition)
6) ಔಷಧಿಗಳ ಮಾನಸಿಕ ಪರಿಣಾಮ.

ಕೇಂದ್ರ ಔಷಧಿ ಸಂಶೋಧನಾ ಮಂಡಲಕ್ಕೆ (Central Medical Research Organisation) ಹೊಂದಿಕೆಯಾಗುವಂತೆ ದೇಶೀಯ ಪದ್ಧತಿಯ ಕೇಂದ್ರ ಸಂಶೋಧನಾ ಮಂಡಲವೊಂದನ್ನು ಕೂಡಲೆ ಸ್ಥಾಪಿಸಬೇಕು. ಇದರಲ್ಲಿ 1) ಹೆಸರಾಂತ ದೇಶೀಯ ಪದ್ಧತಿಯ ವೈದ್ಯರು 2) ಶಾಸ್ತ್ರೀಯರೀತ್ಯಾ ಔಷಧಿ ಸಂಸ್ಥೆಗಳ ಪ್ರತಿನಿಧಿಗಳು 3) ಸಂಶೋಧನಾ ಶಿಕ್ಷಣವೀಯುವ ದೇಶೀಯ ವಿದ್ಯಾಲಯದ ಪ್ರತಿನಿಧಿಗಳು ಇರಬೇಕು. ಈ ಮಂಡಲವನ್ನು ಮೊದಲ ಬಾರಿಗೆ ಸರಕಾರವು ನೇಮಿಸಬೇಕು.

ಸಂಶೋಧನಾ ಮಂಡಲದ ಕಾರ್ಯಕ್ರಮ

1] ಸಂಶೋಧನಾ ಕೆಲಸದ ಬಗ್ಗೆ ಕೈಕೊಳ್ಳಬೇಕಾದ ನಿರ್ದಿಷ್ಟ ಧೋರಣೆ.
2] ಇತರ ವೈದ್ಯಕೀಯ ಪದ್ಧತಿ ಮತ್ತು ಶೋಧನಾ ಕೆಲಸಗಳಿಗೆ ಹೊಂದಿಕೆಯಾಗುವಂತೆ ಮಾಡಬೇಕಾದ ವಿಚಾರ.
3] ದೇಶೀಯ ಕೇಂದ್ರ ಔಷಧಿ ಸಂಶೋಧನಾಲಯ ಸ್ಥಾಪನೆ, ಆಡಳಿತೆ, ಮೇಲ್ವಿಚಾರಣೆ.

4] [illegible]

5] [illegible] Director & Special Staff)

6] [illegible]

7] [illegible]

8] [illegible]

ಸಂಶೋಧನಾಲಯಗಳು [illegible] 1] [illegible] 2] [illegible] ಬಗ್ಗೆ. [illegible]

ಕೇಂದ್ರ ಸಂಶೋಧನಾಲಯದಲ್ಲಿರಬೇಕಾದ ವಿಭಾಗಗಳು:—

1] [illegible] ಮತ್ತು [illegible]

2] [illegible]

3] [illegible] (Organic) ಮತ್ತು (Inorganic) [illegible]

4] ಸಾಹಿತ್ಯ ಶೋಧನೆಗೆ ಅವಶ್ಯವಾದ [illegible] ಭಂಡಾರ.

5] ಪ್ರಯೋಗಗಳ ಅಂಕೆ ಸಂಖ್ಯೆ [illegible]

6] [illegible] ಮತ್ತು [illegible] ನಾಲಯ.

ಸಂಶೋಧನಾಲಯದ ಉಸ್ತುವಾರಿಯು ಸಂಚಾಲಕನಲ್ಲಿ (Director) [illegible] ಸಂಶೋಧನಾ [illegible] ಅನುಭವವಿರುವವರೂ [illegible] ಸಂಶೋಧನಾಲಯದ ಸಕಲ ಕಾರ್ಯಗಳು ಸಂಚಾಲಕನ ಆಜ್ಞೆಗೆ [illegible]

ಎಲ್ಲಾ ವಿಭಾಗಗಳ ಮುಖ್ಯಾಧಿಕಾರಿಗಳು [illegible] ಗಳಲ್ಲಿ ದೇಶೀಯ ಮತ್ತು ಪಾಶ್ಚಾತ್ಯ ರೀತಿಯ ಉತ್ತಮ ಅನುಭವ [illegible] ಬೇಕು. (ಮುಂದುವರಿಯುವುದು)

ಪರಿಚಯ

ವೈದ್ಯ ರಾ. ಕೃ. ಕುಲಕರ್ಣಿ ಜಿನರಾಳಕರ, [illegible].

ಇವರು ಸಾತಾರಾದಲ್ಲಿಯ ಆಯುರ್ವೇದ ವೈದ್ಯಕ (ಆಯುರ್ವೇದ [illegible] ವೈದ್ಯಕ) ವಿದ್ಯಾಲಯದ ಅಂತಿಮ ಪರೀಕ್ಷೆ "ಆಯುರ್ವೇದ ಡಿಪ್ಲೋಮಾ" (G. A. M.) ನ್ನು ೧೯೩೦ರಲ್ಲಿ ಉತ್ತೀರ್ಣರಾಗಿ ವೈದ್ಯ ವಿಷ್ಣು ಶಾಸ್ತ್ರಿ ಪಾಠಕ [illegible] ಶಾಸ್ತ್ರಿ ಜೋಶಿ ಸಾಯಗಾಂವಕರ ಇವರಲ್ಲಿ ಕೆಲಕಾಲ [illegible] ವೈದ್ಯ ವ್ಯವಸಾಯದ ಅನುಭವ ಪಡೆದರು. ೧೯೪೦-೪೧ರಲ್ಲಿ ಆಯುರ್ವೇದ ವೈದ್ಯ ವಿದ್ಯಾಲಯದ "ರಸಾಯನ" [illegible] ವಿಷಯಕ್ಕೆ ಪರೀಕ್ಷಕರೆಂದು ನೇಮಿಸಲ್ಪಟ್ಟರು. ಅನಂತರ ವೈದ್ಯರತ್ನ ಮಾಧವ ಶಾಸ್ತ್ರಿ ಜೋಶೀ ಆಯುರ್ವೇದಾಚಾರ್ಯ ಮುಂಬಯಿ ಇವರಲ್ಲಿ ಆಚಾರ್ಯ ಪರೀಕ್ಷೆಯ ಅಭ್ಯಾಸ ಮಾಡಿ ೧೯೪೩ರಲ್ಲಿ ನಿ. ಭಾ. ವಿದ್ಯಾಪೀಠದ "ಆಯುರ್ವೇದಾಚಾರ್ಯ" ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪದವಿಯನ್ನು ದೊರಕಿಸಿಕೊಂಡರು.

೧೯೪೫ನೇ ಎಪ್ರಿಲ್ ತಿಂಗಳಲ್ಲಿ ದಿ ಸ್ಟೇಟ್ ಫೆಕಲ್ಟಿ ಆಫ್ ಆಯುರ್ವೇದಿಕ್ ಸಿಸ್ಟಮ್ ಆಫ್ ಮೆಡಿಸಿನ್ ಮುಂಬಯಿ ಸಮಿತಿಯ ದ್ರವ್ಯಗುಣ ರಸಶಾಸ್ತ್ರ ಎಂಬ ವಿಷಯದ ಪರೀಕ್ಷಕರೆಂದು ಕೆಲಸ ಮಾಡಿದರು.

ತ್ರಿಧಾತು-ತ್ರಿದೋಷ ಪರಿಷತ್ತು ಮುಂಬಯಿ, ಇದರ ಸಹಾಯಕ ಸಭಾಸದರೆಂದು ಆರಿಸಲ್ಪಟ್ಟಿದ್ದಾರೆ. ಹಾಗೂ ಆಯುರ್ವೇದೋತ್ತೇಜಕ ಮಂಡಳದ ಕಾರ್ಯದರ್ಶಿ ಎಂದು ಕೆಲಸ ಮಾಡುತ್ತಲಿದ್ದಾರೆ.

ಆಯುರ್ವೇದ ಸಂಶೋಧನ ಸೇವಾ ಸಂಘ ಮುಂಬಯಿ ಇದರ ಪ್ರಮುಖ ಸಂಶೋಧಕರಿಗೆ ಸಹಾಯಕರೆಂದು ಕಾರ್ಯ ಮಾಡುತ್ತಲಿದ್ದಾರೆ.

ಜೋಧಪುರದಲ್ಲಿ ನಡೆದ ನಿ. ಭಾ. ಆಯುರ್ವೇದ ಸಮ್ಮೇಲನಕ್ಕೆ "ಬ್ರೇನ್ ಫೀವರ್" ಅಥವಾ ಮೆನೆಂಜಸ್ಮ್ಯಾಟಿಸ್ ಎಂಬ ರೋಗದ ಬಗ್ಗೆ ದೋಷ, ಧಾತು, ಮಲಗಳನ್ನು ಅನುಸರಿಸಿ ಸಂಸ್ಕೃತದಲ್ಲಿ ನಿಬಂಧ ಮತ್ತು ಮಣಿಪಾಲ (ಉಡುಪಿ)ಯಲ್ಲಿ ನೆರೆದ ನಿ. ಭಾ. ಸಮ್ಮೇಳನಕ್ಕೆ ಶ್ಲೀಪದ ರೋಗ ಮತ್ತು ಅದರ ಚಿಕಿತ್ಸೆ ಎಂಬ ವಿಷಯದ ಬಗ್ಗೆ ನಿಬಂಧ ಬರೆದು ಕಳುಹಿಸಿದ್ದು ಅವಕ್ಕೆ ಪ್ರಥಮ ಶ್ರೇಣಿಯ ಬಹುಮಾನ ದೊರೆತಿರುವವು.

ಈಗ ನಿಖಿಲ ಕರ್ನಾಟಕ ಆಯುರ್ವೇದ ಮಂಡಲದ ಜತೆ ಕಾರ್ಯದರ್ಶಿಗಳಾಗಿಯೂ "ಆಯುರ್ವೇದ" ಮಾಸಪತ್ರಿಕೆಯ ಸಂಪಾದಕ ಮಂಡಳಿಯಲ್ಲಿ ಒಬ್ಬರಾಗಿಯೂ ಇರುವರು.

ಸಂಸಾರ ತಾಪತ್ರಯದಲ್ಲಿ ಇವರು ಅತೀ ನೊಂದವರಾಗಿದ್ದರೂ ಇವರ [illegible] ಸ್ವಭಾವಕ್ಕೆ ತಕ್ಕಂತೆ ತಮ್ಮ ಜೀವಮಾನವನ್ನೇ "ಆಯುರ್ವೇದ"ದ ಉದ್ಧಾರಕ್ಕಾಗಿ ಮುಡಿಪಾಗಿಟ್ಟಿರುವದು ಹೆಮ್ಮೆಯ ವಿಚಾರ.



ವಿಷಮಜ್ವರ

ಲೇಖಕ:– ಆಯುರ್ವೇದ ವಿದ್ವಾನ್,
ಪಂಡಿತ ಶ್ರೀ।
ಎಚ್. ಟಿ. ರಾಮಚಂದ್ರಾಚಾರ್ಯ
ಮಾಲಕ:– ಶ್ರೀ ಧನ್ವಂತರಿ ಭೇಷಜಾಲಯ
ಹೆಜಮಾಡಿ, ದ. ಕ.

"ವಿಷಮ ಜ್ವರ" ಎಂಬ ಶಬ್ದಕ್ಕೆ ಸಾಮಾನ್ಯವಾಗಿ "ಕ್ರಮ ತಪ್ಪಿ ಬರುವ ಜ್ವರ" ಎಂದು ಅರ್ಥವಾಗುವುದು. ಯದ್ಯಪಿ ಮಾಧವಕರನು ತನ್ನ ನಿದಾನ ಗ್ರಂಥದಲ್ಲಿ "ದೋಷೋಽಲ್ಪೋಽಹಿತಸಂಭೂತೋ — " ಎಂಬುದಾಗಿ ಸೌಶ್ರುತ [ಉ।೩೯।೬೬] ವಚನದಿಂದ ವಿಷಮಜ್ವರವನ್ನು ಉಲ್ಲೇಖಿಸಿರುವನು. ಆದರೆ ಅದು – ಅದರ ಸಾಮಾನ್ಯ ಲಕ್ಷಣ ಅಥವಾ ಸ್ವರೂಪವನ್ನು ಬೋಧಿಸುವಂತಿಲ್ಲ. ವ್ಯಾಖ್ಯಾನಕಾರನಾದ ವಿಜಯರಕ್ಷಿತನೂ ಕೂಡ ಆ ವಚನವನ್ನು ಅದರ ಸಂಪ್ರಾಪ್ತಿಯನ್ನಾಗಿಯೇ ಸಮರ್ಥಿಸಿರುವನು. ಇರಲಿ; ಈವಾಗ, ಅದು ಹೇಗೆ ಬರುವುದು? ಅದರ ಸ್ವರೂಪವೇನು? ಪ್ರಭೇದಗಳಾವುವು? ಚಿಕಿತ್ಸೆಯೆಂತಹುದು? ಎಂದು ಮೊದಲಾಗಿ ವಿಮರ್ಶಿಸುವ;

ವೈದ್ಯಕ ಗ್ರಂಥಗಳನ್ನು ತಿರುವಿ ಹಾಕುವಾಗ "ಕೃಶಾನಾಂ ವ್ಯಾಧಿಮುಕ್ತಾನಾಂ ಮಿಥ್ಯಾಹಾರಾದಿ ಸೇವಿನಾಂ। ಅಲ್ಪೋಽಪಿದೋಷೋದೂಷ್ಯಾದೇರ್ಲಬ್ಧ್ವಾನ್ಯತಮತೋಬಲಂ। ಸವಿಪಕ್ಷೋಜ್ವರಂ ಕುರ್ಯಾತ್ವಿಷಮಂಕ್ಷಯವೃದ್ಧಿಭಾಕ್, [ಅ ಹೃ। ನಿ। ೨।೬೪-೬೫] ಎಂಬ ಸೂಕ್ತಿಯು ಗೋಚರವಾಗುವುದು. "ವಿಶೇಷತಃ ಕ್ಷೀಣರಾದವರ, ಹಾಗೂ ರೋಗದಿಂದ ಬಿಡುಗಡೆ ಹೊಂದಿ ಒಡನೆಯೇ

ವಿರುದ್ಧ ಪಾನ-ಭೋಜನ ಔಷಧಾದಿಗಳನ್ನು ಪುನಃ ಪುನಃ ನಿರಂತರವಾಗಿಯೂ ಯದ್ವಾತದ್ವಾ ಸೇವಿಸಿದವನ ದೇಹದಲ್ಲಿ ಶೇಷದೋಷ ಉಳಿದುಕೊಂಡಿದ್ದ [ಸಂಪೂರ್ಣವಾಗಿ ಅಳಿದು ಹೋಗದೆ ಅವಶಿಷ್ಟವಾಗಿರುವ] ಅಲ್ಪವಾದ ದೋಷವು ಸಪ್ತಧಾತುಗಳ ಮಧ್ಯೇ ಎಂದರೆ ರಸಾದಿ ಧಾತುಗಳು ಮತ್ತು ಮೂತ್ರ, ಪುರೀಷ, ಸ್ವೇದ, ಮಲಗಳ ಮಧ್ಯೇ ಯಾವುದಾದರೊಂದನ್ನಾದರೂ ಒಳಹೊಕ್ಕು ಸೇರಿ ಅದನ್ನು ದೂಷ್ಯವಾದ ಅಂತಹ ಧಾತುವಿನಿಂದೊಡಗೂಡಿಯೇ ವಿಷಮ ಜ್ವರವನ್ನುಂಟುಮಾಡುವುದು. ಅಂತಹ ಜ್ವರವು—ಕೆಲವು ಕಾಲದಲ್ಲಿ ಒಮ್ಮೊಮ್ಮೆ ಕಡಿಮೆಯಾಗಿಯೂ, ಒಮ್ಮೊಂದೊಮ್ಮೆ ಅತಿರೇಕವಾಗಿಯೂ ಕಾಣಿಸಿಕೊಳ್ಳುವುದು.'' ಇದೇ ಮೇಲಿನ ಶ್ಲೋಕಗಳ ಅಭಿಪ್ರಾಯ. ಇದು ಅದರ ಸ್ವಭಾವವೇ ಆಗಿದೆ. ಕಾಶ್ಯಪ ಸಂಹಿತೆ ಅಥವಾ ವೃದ್ಧ ಜೀವಕೀಯ ತಂತ್ರದಲ್ಲಿ [ಖಿಲಸ್ಥಾನ ಅಂ ೧೩-೧೪] ಇದನ್ನು ಇನ್ನೂ ವಿಶದೀಕರಿಸಿರುವರು. ಎಂದರೆ – ಜ್ವರ ಹಿಂತಿರುಗಲಿ, ಜ್ವರದಿಂದ ಬಿಡುಗಡೆ ಹೊಂದುತ್ತಿರುವವನಾಗಲೀ, ಜ್ವರದಿಂದ ಬಿಡುಗಡೆ ಹೊಂದಿದವನಾಗಲೀ ಒಡನೆಯೇ ವ್ಯಾಯಾಮ – ಗುರು ಆಹಾರ – ಅಸಾತ್ಮ್ಯಪಾನ [ತನಗೆ ಹಿಡಿಯದಿರುವ ಅನ್ನಪಾನ] – ಅತಿರೇಕವಾದ ಜಲಪಾನ – ಪಾಯಸ – ಮಾಂಸ – ಮೊಸರು – ವಿರುದ್ಧಾನ್ನಪಾನಾದಿಗಳನ್ನು ಸೇವಿಸಿದ್ದರೆ ತಕ್ಷಣ ಜ್ವರವು ಅಭಿವೃದ್ಧಿ ಹೊಂದುವುದು ಅಥವಾ ವಿಷಮ ಜ್ವರವಾಗಿ ಪರಿಣಮಿಸುವುದು ಮಾತ್ರವಲ್ಲದೆ ಅದೇ ಕಾಶ್ಯಪ ಸಂಹಿತೆಯಲ್ಲಿ [ಖಿ।೧। ೧೬–೨೦]–"ದೋಷವು ಚೆನ್ನಾಗಿ ಪಕ್ವವಾಗದಿರಲು ಯಾವನು ಕಷಾಯವನ್ನು ಸೇವಿಸುತ್ತಾನೋ, ಇಲ್ಲವೆ ಚಾಪಲ್ಯದಿಂದ ಸ್ನೇಹಪಾನ-ಹಾಲು-ಗುರು ಆಹಾರಗಳನ್ನು ಪರಿಗ್ರಹಿಸುತ್ತಾನೋ. ವಮನ ಅಥವಾ ವಿರೇಚನೌಷಧಗಳನ್ನು ಸೇವಿಸಿದವನು ಅಥವಾ ಸ್ನೇಹಪಾನ ಮಾಡಿದವನು ಅಥವಾ ಅನುವಾಸನಾವಸ್ತಿ ಪ್ರಯೋಗವನ್ನು ಮಾಡಿಸಿಕೊಂಡವನು ಒಡನೆಯೇ ಶೀತೋಪಚಾರ – ಗುರ್ವನ್ನಭೋಜನ – ಸಂಭೋಗಗಳಲ್ಲಿ ಪ್ರವರ್ತಿಸುತ್ತಾನೋ ಅದರಿಂದಾಗಿ ಅತನಿಗೆ ಧಾತು ವೈಷಮ್ಯವುಂಟಾಗಿ ವಿಷಮಜ್ವರವು ಸಂಭವಿಸುತ್ತದೆ'' ಎಂದು ಮೊದಲಾಗಿ ಸಹ ಕಂಡುಬರುತ್ತದೆ. ಈ ಎಲ್ಲಾ ವಚನಗಳಿಂದ ವಿಷಮ ಜ್ವರವು ಹೇಗೆ ಬರುವುದೆಂಬುವನ್ನು ತಿಳಿದಂತಾಗುವುದು.

ಇನ್ನು – ಅದರ ಸ್ವರೂಪ ವಿಚಾರ. ಈ ಮೊದಲು ಉದಾಹರಿಸಿದ ಶ್ಲೋಕಗಳ ಕೊನೆಯ ಪಾದವಾದ '' – ವಿಷಮಂಕ್ಷಯವೃದ್ಧಿಭಾಕ್'' ಎಂಬ ವಾಕ್ಯದಿಂದ ಮುಖ್ಯ ಲಕ್ಷಣವು ಸೂತ್ರರೂಪವಾಗಿ ಸೂಚಿಸಲ್ಪಟ್ಟಿರುತ್ತದೆ. ಅದನ್ನೇ – ವಿಷಮೋವಿಷಮಾರಂಭಕ್ರಿಯಾಕಾಲೋಽನುಷಂಗವಾನ್'' [ಅ। ಹೃ। ನಿ। ೨।೬೯]ವೆಂಬುದಾಗಿ ಇನ್ನೂ ಸ್ವಲ್ಪ ವಿಶದೀಕರಿಸಿರುವರು. ಅದರೆ ಇದಕ್ಕಿಂತಲೂ

ಭಾಲುಕಿತಂತ್ರದಲ್ಲಿ ಕಾಣುವ "ಯಃಸ್ಯಾದನಿಯತಾತ್ಕಾಲಾಚ್ಛೀತೋಷ್ಣಾಭ್ಯಾಂತಥೈವಚ। ವೇಗತಶ್ಚಾಪಿವಿಷಮುಸ್ಸಜ್ವರೋವಿಷಮಃಸ್ಮೃತಃ" ಎಂಬ ವಾಕ್ಯವು ಅತ್ಯಂತ ವಿಶದವಾಗಿ ಇದರ ಸ್ವರೂಪವನ್ನು ತೋರಿಸಿಕೊಡುತ್ತದೆ. ಇದನ್ನೇ ವಿಜಯರಕ್ಷಿತನು ಅನುಮೋದಿಸಿರುವನು. ಶ್ರೀ। ಮಹಾಮಹೋಪಾಧ್ಯಾಯ ಗಣನಾಥಸೇನ ಸರಸ್ವತೀ, ಎಂ. ಎ; ಎಲ್. ಎಂ. ಎಸ್. ರವರು ತನ್ನ ಸಿದ್ಧಾಂತ ನಿಧಾನ ಗ್ರಂಥದಲ್ಲಿ ಇದನ್ನೇ ಎತ್ತಿ ಹಿಡಿದಿರುವರು. ಈಗ ಲೋಕದಲ್ಲಿ ಕಂಡು ಬರುವ ಅನುಭವಕ್ಕೂ ಈ ಭಾಲುಕಿಯ ವಚನಕ್ಕೂ ಸರಿಹೋಲುವುದು. "ಜ್ವರವು – ಆರಂಭಿಸುವ ಮತ್ತು ಬಿಡುಗಡೆ ಹೊಂದುವ ವೇಳೆ, ಜ್ವರದ ಆರಂಭ ಅಥವಾ ಬಿಡುಗಡೆ ಸಮಯ ಛಳಿಯಾಗುವಿಕೆ ಅಥವಾ ಕಾವು ಏರುವಿಕೆ, ಜ್ವರದ ವೇಗ [force] ಇವುಗಳಲ್ಲಿ "ಹೀಗೆಯೇ" ಅಥವಾ "ಇಷ್ಟೇ" ಎಂದು ನಿಯಮವಿಲ್ಲದಿದ್ದರೆ ಆಗ ಅದು "ವಿಷಮಜ್ವರ" ಎನಿಸುತ್ತದೆ ಎಂಬುದೇ ಭಾಲುಕಿ ವಚನದ ವಾಚ್ಯಾರ್ಥ. ಅರ್ಥಾತ್ "ಜ್ವರವು-ಈ ದಿನ ಬೆಳಿಗ್ಗೆ, ನಾಳೆ ಸಾಯಂಕಾಲ, ನಾಳದು ಮಧ್ಯಾಹ್ನ, ಅಥವಾ ರಾತ್ರಿ, ಅಥವಾ ಒಂದು ದಿನದ ನಂತರ ಅಥವಾ ಎರಡು ದಿನಗಳ ತರುವಾಯ ಹೀಗೆ ಕಾಲ ನಿಯಮವಿಲ್ಲದೆ ಬರುವುದಾಗಿದ್ದರೂ, ಆರಂಭದಲ್ಲಿ ಛಳಿಯಾಗಿ ಕೊನೆಗೆ ಬಿಸಿಯೇರಬಹುದು ಅಥವಾ ಆರಂಭದಲ್ಲಿ ಬಿಸಿಯಾಗಿ ಕೊನೆಗೆ ಛಳಿಯಾಗಬಹುದು ಅಥವಾ ಇವೆರಡೂ ಇಲ್ಲದಿರಲೂ ಬಹುದು. ಹೀಗಿದ್ದರೂ, ಈಗ ಏನೂ ಕಾಣಿಸದೆ ಸ್ವಲ್ಪ ಸಮಯದ ಮೇಲೆ ತೀವ್ರ ವೇಗದಿಂದ ಎಂದರೆ ಡಿಗ್ರಿ ೧೦೩ರಿಂದ ೧೦೬ರ ವರೆಗೂ ಏರಬಹುದು. ನಂತರ ಅದೇ ದಿನ ಅಥವಾ ರಾತ್ರಿಯಲ್ಲಿ ಕಡಮೆಯಾಗುತ್ತಾ ಜ್ವರವು ಏನೂ ಕಾಣಿಸದೆ ಶಾಖವು ೯೬ರ ವರೆಗೂ ಇಳಿಯಬಹುದು. ಅಥವಾ ಜ್ವರದ ಭೋಗ ಕಾಲದಲ್ಲಿ ನ್ಯೂನಾತಿರೇಕತ್ವವು ಇರಬಹುದು ಎಂದರೆ ಒಂದು ದಿನ ಮೈಯಲ್ಲಿ ಜ್ವರವು ಸ್ವಲ್ಪ ಕಾಲದ ವರೆಗೆ ಇದ್ದು ಇನ್ನೊಂದು ದಿನ ಹೆಚ್ಚು ಕಾಲದ ವರೆಗೂ ಇರಬಹುದು. ಮತ್ತೊಂದು ದಿನ ಅತ್ಯಲ್ಪ ಕಾಲದ ವರೆಗೆ ಮಾತ್ರ ಕಾಣಿಸಿಕೊಳ್ಳಬಹುದು ಅಥವಾ ಒಂದು ದಿನ ತೀಕ್ಷ್ಣ ವೇಗದಿಂದ ಇನ್ನೊಂದು ದಿನ ಮಂದವೇಗದಿಂದ ತೋರಿಕೊಳ್ಳಬಹುದು ಇವೇ ಮೊದಲಾಗಿ ಇಲ್ಲಿ ವಿವರಿಸಿದ ರೀತಿಗಳಲ್ಲಿ ಯಾವ ಮಾದರಿಯಿಂದ ಇದ್ದರೂ ಅದು ವಿಷಮಜ್ವರವೆಂದೇ ಎಣಿಸಲ್ಪಡುವುದು" ಎಂದು ಸಿದ್ಧವಾಗುತ್ತದೆ.

ಪ್ರಭೇದಗಳು — ಇದರಲ್ಲಿ "ಸಂತತ, ಸತತ, ಅನ್ಯೇದ್ಯುಷ್ಕ, ತೃತೀಯಕ, ಚಾತುರ್ಥಿಕ" ಎಂಬ ಐದು ಪ್ರಭೇದಗಳಿರುವುದಾಗಿ ಮಾಧವಕರನ ಅಭಿಪ್ರಾಯ ಸಂತತ ಜ್ವರವೊಂದರ ವಿನಹ ಉಳಿದ ನಾಲ್ಕು ಜ್ವರಗಳೇ ವಿಷಮಜ್ವರದ ಪ್ರಭೇದಗಳೆಂದು ಚರಕ, ವಾಗ್ಭಟ, ಖರನಾದ ಮೊದಲಾದವರ ಅಭಿಪ್ರಾಯ. ಮೇಲಿನ

ಜ್ವರ ರೋಗಿಗೆ [illegible]
ವಾಗಿ ಸುಶ್ರುತ [ಉತ್ತರತಂತ್ರ ೩೯] ನೂ [illegible] ಬೇರೆ ಬೇರೆ
ಅಭಿಪ್ರಾಯಗಳನ್ನು ಪ್ರಕಟಿಸಿರುವನು. [illegible]
ಸಂತತಾದಿ ಐದು ಜ್ವರಗಳನ್ನೂ, [illegible]
ಗ್ರಹಣ್ಯಾದಿಜನ್ಯ ಜ್ವರಗಳನ್ನೂ ಎಂದರೆ [illegible]
ಈ ಎಲ್ಲಾ ಜ್ವರಗಳನ್ನು ವಿಷಮಜ್ವರದ ಪ್ರಭೇದಗಳನ್ನಾಗಿಯೇ [illegible]
೧೦೫] ಹೇಳಿರುವನು. ಇರಲಿ; ಈ ವಿಷಯವಾಗಿ ಸ್ವಲ್ಪ ವಿಮರ್ಶಿಸುವ.

"ವಿಷಮುಕ್ತ" ಅಥವಾ "ಮುಕ್ತಾನುಬಂಧಿತ್ವ" ಎಂದರೆ ಕಾಲ-ವೇಗ-ವೇಗವಿಷಯದಲ್ಲಿ ಕ್ರಮವಿಲ್ಲದ ಪರಿಸ್ಥಿತಿಯು ಸತತಾದಿ ಎಲ್ಲಾ ಪ್ರಭೇದಗಳಲ್ಲಿ ಯಿರುವುದೆಂಬುದು ಸರ್ವಸಮ್ಮತವಾದುದೇ. ಆದರೆ "ಸಪ್ತಾಹಂವಾ ದಶಾಹಂವಾ ದ್ವಾದಶಾಹಮಥಾಪಿವಾ। ಸಂತತ್ಯಾ ಯೋಽವಿಸರ್ಗೀಸ್ಯಾತ್ಸಂತತಃ ಸನಿಗದ್ಯತೇ" (ಮಾಧವನಿಧಾನ ಮತ್ತು ಸುಶ್ರುತ। ಉ। ೩೯।) ಎಂಬ ವಚನಾನುಸಾರವಾಗಿ ಏಳು ಅಥವಾ ಹತ್ತು ಅಥವಾ ಹನ್ನೆರಡು ದಿನಗಳ ವರೆಗೂ ಒಂದೇ ಸಮನೆ ಎಡೆ ಬಿಡದೆ ಬರುತ್ತಿರುವ ಜ್ವರವೇ "ಸಂತತಜ್ವರ" ವೆನಿಸುತ್ತದೆ. ಹೀಗೆ ಎಡೆ ಬಿಡದೆ ಬರುತ್ತಿರುವ ಈ ಜ್ವರವನ್ನು ಹಿಂದೆ ಹೇಳಿದ ಲಕ್ಷಣಾನುಗುಣವಾಗಿ ವಿಷಮಜ್ವರವರ್ಗದಲ್ಲಿ ಸೇರಿಸುವುದಾದರೂ ಹೇಗೆ? ಎಂಬ ಆಕ್ಷೇಪವು ಬಂದೇ ಬರುತ್ತದೆ. ಯದ್ಯಪಿ ಆಕ್ಷೇಪವು ಸಹಜವಾದುದೇ. ಆದರೆ ಚರಕನು — "ವಿಸರ್ಗಂದ್ವಾದಶೇಕೃತ್ವಾ ದಿವಸೇಽವ್ಯಕ್ತಲಕ್ಷಣಃ। ದುರ್ಲಭೋಪಶಮಃ ಕಾಲಂ ದೀರ್ಘಮಪ್ಯನುವರ್ತತೇ" [ಚ। ಚಿ। ೩। ೬೦] ಎಂಬುದಾಗಿ ಸಂತತಜ್ವರವು ಹನ್ನೆರಡನೇ ದಿನದಲ್ಲಿ ಬಿಟ್ಟು ಬಿಟ್ಟು ತನ್ನ ಲಕ್ಷಣಗಳನ್ನು ಸಂಪೂರ್ಣ ಪ್ರಕಟಿಸದೆ ಸೂಕ್ಷ್ಮವಾಗಿಯೇ ಇದ್ದು ದೀರ್ಘ ಕಾಲದ ವರೆಗೂ ಕಾಡುತ್ತಿರುವುದು ಎಂದ ಮೇಲೆ ಆ ಸಂತತಜ್ವರದಲ್ಲಿಯೂ ವಿಷಮುಕ್ತ ಅಥವಾ ಮುಕ್ತಾನುಬಂಧಿತ್ವವು ಇದ್ದೇ ಇದೆ ಎಂಬುದು ಸ್ಪಷ್ಟವಾಗುವುದು. "ಸಪ್ತಾಹಂವಾದಶಾಹಂವಾ—" ಎಂಬ ಸೌಶ್ರುತ ವಚನಕ್ಕೆ ವ್ಯಾಖ್ಯಾನ ಮಾಡುವಾಗ ಡಲ್ಲಣನೂ ಸಹ ಈ ಜ್ವರವು ಸನ್ನಿಪಾತಜವಲ್ಲವೆಂದೂ, ಪರಂತು ಏಕದೋಷಜ ಅಥವಾ ದ್ವಿದೋಷಜವಾದುದೆಂದೂ "ದಶಾಹಂದ್ವಾದಶಾಹಂವಾ ಸಪ್ತಾಹಂವಾಸುದುಸ್ಸಹಃ। ಸಶೀಘ್ರಂ ಶೀಘ್ರಕಾರಿತ್ವಾತ್ಪ್ರಶಮಂ ಯಾತಿಹಂತಿವಾ" [ಚ। ಚಿ। ೩। ೫೫] ಎಂದು ವರ್ಣಿಸಲ್ಪಟ್ಟಿರುವ "ಇತ್ಯಗ್ನಿವೇಶಸ್ಯಮತಂ—" [ಅ। ಸ್ಮ। ನಿ। ೩। ೬೨] ಎಂದು ವಾಗ್ಭಟನಿಂದ ಅನುವಾದಿಸಲ್ಪಟ್ಟಿರುವ ಸನ್ನಿಪಾತಜ ಸಂತತಜ್ವರವು ಬೇರೆಯೇ ಆಗಿದೆಯೆಂದೂ ಅಭಿಪ್ರಾಯಪಟ್ಟಿರುವ ಹಾಗೆ ಕಾಣುತ್ತದೆ. ಪಾಶ್ಚಾತ್ಯ ವೈದ್ಯರೂ ಸಹ ವಿಷಮ ಜ್ವರ [malaria] ದಲ್ಲಿಯೇ ಸುಮಾರು ೧೦-೧೪ ದಿನಗಳ ವರೆಗೂ ಎಡೆಬಿಡದೆ ಬರುವ ಒಂದು ಪ್ರಭೇದ [Remittent fever] ವಿರುವುದಾಗಿ ಹೇಳುವರು.

ಇವೆಲ್ಲವನ್ನೂ ಪರಿಶೀಲಿಸುವಾಗ ವಾಗ್ಭಟಕರಿಂದ ನಿರ್ದೇಶಿಸಲ್ಪಟ್ಟ ಸೌಶ್ರುತ ಸಂತತಜ್ವರವು ವಿಷಮಜ್ವರ ವರ್ಗದಲ್ಲಿಯೇ ಅಡಗುವುದೆಂಬುದು ನನ್ನ ಅಭಿಪ್ರಾಯ. ಇನ್ನು–ಸುಶ್ರುತನು "ಪ್ರಲೇಪಕ" ಜ್ವರವನ್ನು ವಿಷಮಜ್ವರಗಳ ನಡುವೆ ಸೇರಿಸಿಕೊಂಡಹಾಗೆ ಸ್ಪಷ್ಟವಾಗಿ ತೋರಿದ್ದರೂ ಆತನು – "ಪ್ರಲೇಪಕಂ ವಾತಬಲಾಸಕಂಚ ಕಫಾಧಿಕತ್ವೇನ ವದಂತಿತಜ್ಞಾಃ" [ಸು। ಉ। ೩೯।೫೮] ಎಂಬುದಾಗಿ ಪ್ರಲೇಪಕದ ಜೊತೆಗೆನೇ ವಾತಬಲಾಸಕವನ್ನೂ ಸೇರಿಸಿ ವಿಷಮಜ್ವರದ ಪ್ರಕರಣದಲ್ಲಿ ಹೇಳಿರುವದಾಗಿ ತೋರಿಬರುತ್ತದೆ ಆ ಒಂದು ಹೇತುವಿನಿಂದ ಅದನ್ನು ವಿಷಮಜ್ವರ ವರ್ಗದಲ್ಲಿ ಸೇರಿಸಬೇಕೇ ವಿನಃ ವಸ್ತುತಃ ವಾತಬಲಾಸಕದಲ್ಲಿ ವಿಷಮತ್ವವು ಕಂಡುಬರುವುದಿಲ್ಲ. ಆದುದರಿಂದ ಅದೂ, ಶ್ಲೀಪದ ಮತ್ತು ಗ್ರಹಣ್ಯಾದಿಗಳಲ್ಲಿ ಅಂಗಭೂತ [ಉಪದ್ರವ] ವಾಗಿರುವ ಜ್ವರವು. ಈ ವಿಷಮಜ್ವರ ವರ್ಗದಲ್ಲಿ ಅಡಗುವವು ಯೆಂಬುದನ್ನು ಇನ್ನೂ ವಿಮರ್ಶಿಸಬೇಕಾದುದೇ.

ಯಾವ ಯಾವ ದೋಷಗಳು ಯಾವ ಯಾವ ಧಾತುಗಳನ್ನಾಶ್ರಯಿಸಿ ಯಾವ ಯಾವ ಪ್ರಭೇದಗಳನ್ನು ಕಲ್ಪಿಸುವುವು? ಅಂತಹ ಪ್ರಭೇದಗಳ ಪ್ರಾಮುಖ್ಯ ಲಕ್ಷಣಗಳಾವುವು? ಹಾಗೆ ಕ್ರಮತಪ್ಪಿ ಬರಲು ಕಾರಣವೇನು? ಎಂದು ಮೊದಲಾಗಿ ವಿಮರ್ಶಿಸುವ:

ವಾತಾದಿ ದೋಷಗಳು ಸ್ರೋತಸ್ಸುಗಳಿಂದ ಮುಕ್ತಗೊಳ್ಳಲ್ಪಟ್ಟು ಆಮಾಶಯವನ್ನು ಸೇರಿ ರಸವಾಹಿಗಳಿಂದ ದೇಹದ ಸರ್ವ ಭಾಗಗಳಲ್ಲಿಯೂ ವ್ಯಾಪಿಸಿ ಧಾತುಗಳನ್ನೂ ಮಲಮೂತ್ರಗಳನ್ನೂ ಸಹ ಆಶ್ರಯಿಸಿ ಏಳು ಅಥವಾ ಹತ್ತು ಅಥವಾ ಹನ್ನೆರಡು ದಿವಸಗಳವರೆಗೂ ಎಡೆಬಿಡದೆ [ಅವಿಚ್ಛಿನ್ನವಾಗಿ] ಸಹಿಸಲಸಾಧ್ಯವಾದ ಜ್ವರವನ್ನುಂಟುಮಾಡುತ್ತವೆ. ಧಾತುಗಳು ಮಾತ್ರ ಅತ್ಯಂತ ದುಷ್ಟಗಳಾಗಿದ್ದು ಏಳು ದಿನಗಳೊಳಗೆ ಅವು ಸಂಪೂರ್ಣ ಶುದ್ಧಿ ಹೊಂದಿದರೆ ಏಳನೇ ದಿನದ ಅಂತ್ಯದಲ್ಲಿ ಜ್ವರವು ನಿಲ್ಲುವುದು. ಶುದ್ಧಿ ಹೊಂದದೆಯಿದ್ದರೆ ಏಳನೇ ದಿವಸದ ಅವಸಾನದಲ್ಲಿ ಮರಣ ಸಂಭವಿಸಬಹುದು ಧಾತುಗಳ ಜೊತೆಗೆ ತ್ರಿದೋಷಗಳೂ ಅತ್ಯಂತ ದುಷ್ಟಗಳಾಗಿದ್ದು ಹತ್ತನೇ ದಿನಾವಸಾನದಲ್ಲಿ ಅವೆಲ್ಲವೂ ಶುದ್ಧಿ ಹೊಂದಿದರೆ— ಹತ್ತನೇ ದಿವಸಾಂತ್ಯದಲ್ಲಿ ಜ್ವರವು ಬಿಡುಗಡೆಹೊಂದುವುದು. ಎಷ್ಟಕ್ಕೂ ನಿರ್ದುಷ್ಟಗಳಾಗದೆಯಿದ್ದರೆ– ಆ ದಿವಸಾಂತ್ಯದಲ್ಲಿ ಮೃತಿಹೊಂದಬಹುದು. ಧಾತುಗಳು, ತ್ರಿದೋಷಗಳು, ಮಲ ಮೂತ್ರಗಳೂ ಇವೆಲ್ಲವೂ ಅತ್ಯಂತ ದುಷ್ಟಗಳಾಗಿದ್ದು ಹನ್ನೆರಡನೇ ದಿವಸದ ಕೊನೆಯಲ್ಲಿ ಅಶೇಷವಾಗಿ ಶುದ್ಧಿ ಹೊಂದಿದರೆ– ಹನ್ನೆರಡನೇ ದಿನದ ಕೊನೆಯಲ್ಲಿ ಜ್ವರವು ಬಿಟ್ಟುಬಿಡುವುದು. ಯಾವ ವಿಧದಿಂದಲೂ ಶುದ್ಧಿಯನ್ನು ಹೊಂದದೆಯಿದ್ದರೆ ಹನ್ನೆರಡನೇ ದಿವಸಾಂತ್ಯದಲ್ಲಿ ದೇಹದ ಅವಸಾನವಾಗಬಹುದು. [ಚ। ಚಿ। ೩।೫೪-೫೯] ಇದರಲ್ಲಿ ಮೂರು ದೋಷಗಳೂ ಒಂದೇ ಸವನೆ

ಪ್ರಕಾಶಿತವಾಗುವವು. ಶ್ರೀ [illegible] ಜ್ವರ [illegible]
ಜ್ವರವು ವಿಷಮಜ್ವರವರ್ಗದಲ್ಲಿ [illegible]
ಒಂದು ಪ್ರಾಯಶಃ ವಿಷಮಜ್ವರ" [illegible]
ಪಡಿಸುತ್ತದೆ. ಈ ವಿಷಮಜ್ವರವು [illegible]
ಜನ್ನು, ಧಾತುಗಳನ್ನು [illegible] [ಚ. ಚಿ. ೩ [illegible]] [illegible]
ಉಂಟುಮಾಡುವ [illegible]
ಹೇಳಿದನು. ಗಂಭೀರ [illegible] ತೀವ್ರತೆಯಿದೆ [illegible]
ಕಾಣಿಸಿಕೊಳ್ಳುವ ಜ್ವರವೇ ವಿಷಮಜ್ವರವಲ್ಲ [illegible]
ಈ ಅಭಿಪ್ರಾಯವನ್ನು [illegible] ಸಂತತಜ್ವರ [illegible]
ಲಕ್ಷಣ: | [illegible]
[illegible] ಸು। ಉ। ೩೯।೬೯ ರವ್ಯಾಖ್ಯಾನ] ಎಂಬ ವಾಕ್ಯವು ಸ್ಪಷ್ಟೀಕರಿಸುತ್ತದೆ. ಆದರೆ
ಮಾತ್ರವಲ್ಲದೆ "ಪ್ರಾಯಶಃ ಸನ್ನಿಪಾತೇನ [illegible]
ಸಂಯೋಗಭೂಯಸ್ತ್ವ [illegible]" [ಚ. ಚಿ. ೩। ೬೮] [illegible]
ಸನ್ನಿಪಾತದಿಂದ ಸಂತತಾದಿ ಜ್ವರಗಳು ಕಾಣಿಸಿಕೊಳ್ಳುವುವಾಗಿ ಚರಕರು ಪ್ರತಿಪಾದಿಸಿದರೂ ಆ ವಾಕ್ಯದಲ್ಲಿಯೇ "ಪ್ರಾಯಶಃ" ಎಂಬ ಶಬ್ದವನ್ನು ಸೇರಿಸಿರುವುದರಿಂದಲೂ ಸನ್ನಿಪಾತದಲ್ಲಿ ಸಹ ಒಂದು ದೋಷದಿಂದಲೂ ಜ್ವರವು ಬರಬಹುದೆಂದು ವಿಶದಗೊಳಿಸಿರುವುದರಿಂದಲೂ ಈ ಸಂತತಜ್ವರದಲ್ಲಿ "ದೋಷ" ಭೇದದಿಂದ ಎರಡು ಪ್ರಭೇದಗಳನ್ನು ಕಲ್ಪಿಸಬಹುದು. ಅದರಂತೆ ಸಂತತಜ್ವರದಲ್ಲಿ– "[೧] ತ್ರಿದೋಷ ಪ್ರಕೋಪಜ [೨] ಏಕದೋಷ ಅಥವಾ ದ್ವಿದೋಷ ಪ್ರಕೋಪಜ" ಎಂಬ ಎರಡು ಭೇದಗಳನ್ನು ಕಲ್ಪಿಸಿಕೊಂಡರೆ– ಈ ಎರಡನೆಯ ಭೇದವು ಮಾತ್ರ ಈ ವಿಷಮಜ್ವರ ವರ್ಗದಲ್ಲಿ ಅಂತರ್ಗತವಾಗುವುದೆಂದು ನನ್ನ ಅಭಿಪ್ರಾಯ.

ದೋಷವು ರಕ್ತಧಾತುವನ್ನಾಶ್ರಯಿಸಿಕೊಂಡಾಗ "ಸಂತತ" ಜ್ವರವು ಬರುವುದು. ದೇಹದಲ್ಲಿ ಇದು ಇಡೀ ರಾತ್ರಿ ಹಗಲಲ್ಲಿ ಎರಡಾವೃತ್ತಿ ಉದ್ರೇಕಿಸಿಕೊಂಡು ಹಾಗೆಯೇ ಶಾಂತವಾಗುವುದು ಎಂದರೆ ಎರಡು ಸಲ ಜ್ವರವು ಕಾಣಿಸಿಕೊಂಡು ಹಾಗೆಯೇ ಬಿಟ್ಟುಬಿಡುವಂತಿರುವುದೆಂಬ ತಾತ್ಪರ್ಯ. ಈ ವಿಕಾರವು ಪರಿಣಮಿಸುತ್ತಾ ಹೋದಲ್ಲಿ ಇದೇ "ಕಾಲಜ್ವರ" [Kala azar] ವಾಗಿ ಪರಿಣಮಿಸುವುದೆಂದು ಶ್ರೀ ಗಣನಾಥ ಸೇನರವರು ಪ್ರತಿಪಾದಿಸುವರು. ಈ ಕಾಲಜ್ವರದಲ್ಲಿ – ಅಗ್ನಿಮಾಂದ್ಯ, ಪಾಂಡುತ್ವ, ಶೋಥ, ದೌರ್ಬಲ್ಯ, ಕಾರ್ಶ್ಯ, ಪ್ಲೀಹವೃದ್ಧಿ ಇತ್ಯಾದಿ ಪ್ರಾಮುಖ್ಯ ಲಕ್ಷಣಗಳಿರುವುವು. ಒಂದಾನೊಂದು ವೇಳೆ ಇದರಲ್ಲಿ– ಅತಿಸಾರವೂ, ಮೂಗು ಅಥವಾ ವಸಡಿನಿಂದ ರಕ್ತಸ್ರಾವವೂ ಸಂಭವಿಸಬಹುದು. ಅಂತು ಈ ಜ್ವರವು ಅತ್ಯಂತ ಕಷ್ಟಸಾಧ್ಯವಾಗಿದೆ [ಸಿ. ಸಿ. ಪುಟ ೧೧೭].

ದೋಷವು ಮಾಂಸಧಾತುವನ್ನು ಸೇರಿದಲ್ಲಿ ಅನ್ಯೇದ್ಯುಷ್ಕ ಜ್ವರವು ಬರುವುದು. ಇದು- ಇಡೀ ರಾತ್ರಿ ಹಗಲಿನಲ್ಲಿ ಒಂದು ಸಲ ಬಂದು ಬಿಡುವುದು. ತೃತೀಯಕ ಜ್ವರವು ಮಧ್ಯೆ ಒಂದು ದಿನವನ್ನು ಬಿಟ್ಟು ನಂತರ ಬರುವುದು. ಇದರಲ್ಲಿ ದೋಷವು ಮೇದೋಧಾತುವನ್ನು ಸೇರಿಕೊಂಡಿರುವುದು. ಈ ತೃತೀಯಕ ಜ್ವರದ ವ್ಯಾಪ್ತಿಯಲ್ಲಿ ೩ ರೀತಿಗಳಿರುವುವು. "ತ್ರಿಕ" ಎಂದರೆ - ಬೆನ್ನುಮೂಳೆಯಿಂದಲೂ ಗುದದ ಮೂಳೆಯಿಂದಲೂ ಅನಾಮಿಕ ಮೂಳೆಗಳಿಂದಲೂ ಸಂಧಿಸಲ್ಪಡುವ ಭಾಗ. ಇದು ವಾತಸ್ಥಾನವಾಗಿದ್ದರೂ ಇದನ್ನು ಕಫಪಿತ್ತಗಳು ಆಕ್ರಮಿಸಿ ತ್ರಿಕಪ್ರದೇಶದಲ್ಲಿ ಅತ್ಯಂತ ವೇದನೆಯನ್ನುಂಟುಮಾಡುತ್ತಾ ಜ್ವರವನ್ನು ಬರಗೊಡಿಸುವುವು ಅಥವಾ ಶಿರಸ್ಸು ಕಫದ ಸ್ಥಾನವಾಗಿದ್ದರೂ ವಾತಪಿತ್ತಗಳು ಅದನ್ನು ಆಕ್ರಮಿಸಿ ಅಲ್ಲಿ ವಿಶೇಷ ವೇದನೆಯನ್ನುಂಟುಮಾಡುತ್ತಾ ಜ್ವರವನ್ನುಂಟುಮಾಡುವುವು ಅಥವಾ ಪೃಷ್ಠವು [ಬೆನ್ನು] ಪಿತ್ತದ ಸ್ಥಾನವಾಗಿದ್ದರೂ ಅದನ್ನು ವಾತಕಫಗಳು ಆಕ್ರಮಿಸಿ ಅಲ್ಲಿ ವೇದನೆಯನ್ನುಂಟುಮಾಡುತ್ತಾ ಜ್ವರವನ್ನು ಇದಿರುಹಾಕುವುವು. ಬೇರೆ ದೋಷದ ಸ್ಥಾನವನ್ನು ಆಕ್ರಮಿಸಿ ಬಲವನ್ನು ಹೊಂದಿದ ನಂತರ ಜ್ವರದ ಆರಂಭವಾಗಬೇಕಾದುದರಿಂದ ಮಧ್ಯೆ ಒಂದು ದಿನ ಜ್ವರವು ಕಾಣಿಸದಿರಲು ಕಾರಣವೆಂದು ಜೇಜ್ಜಟನ ಮತವಾಗಿರುತ್ತದೆ

ಚಾತುರ್ಥಿಕ ಜ್ವರದಲ್ಲಿ—ಮಧ್ಯೆ ಎರಡು ದಿನ ಬಿಟ್ಟಿಂತಿದ್ದು ನಂತರ ಒಂದು ದಿನ ಮಾತ್ರ ಜ್ವರವು ಕಾಣಿಸುವುದು. ಇದರಲ್ಲಿ ಮೇದೋ- ಅಸ್ಥಿ- ಮಜ್ಜಾಧಾತುಗಳ ಮಧ್ಯೆ ಯಾವುದಾದರೊಂದು ಅಥವಾ ಕೇವಲ ಮಜ್ಜಾಧಾತು ಮಾತ್ರವೇ ದೋಷದಿಂದ ಆಶ್ರಯಿಸಲ್ಪಡುವುದು [ಅ। ಹೃ। ನಿ॥ ೨।೭೩] ಇದು ಅತ್ಯಂತ ಭಯಂಕರವಾದುದು. ಇದರಲ್ಲಿ ಒಡನೆಯೇ ಪಾಂಡು- ಶೋಥ- ಕಾಮಲಾ- ಅತಿಸಾರಾದಿಗಳು ಸಂಭವಿಸಿ ಕೃಚ್ಛ್ರಸಾಧ್ಯವಾಗಿ ಪರಿಣಮಿಸುವುದು.

(ಮುಂದರಿಯುವುದು.)

ಸುಲಭ ಔಷಧಿಗಳು

[ನಿಮ್ಮ ಪ್ರಶ್ನೆಗೆ ನಮ್ಮ ಅನುಭವ.]

ಟಿ. ಯಾವರ್. ಯಾವರ್. ಯು.

ಪ್ರಶ್ನೆ:— ಒಂದು ರೋಗಿಗೆ 57 ವರ್ಷ ವಯಸ್ಸು. ಅಜೀರ್ಣ, ಕೆಮ್ಮು, ನಿಶ್ಶಕ್ತಿ. ಬಹಳ ಔಷಧ ಮಾಡಿದರೂ ಗುಣವಿಲ್ಲ. ನಿಮ್ಮ ಅನುಭವ ತಿಳಿಸುವಿರಾ?

ಉತ್ತರ:— ಮಲಾವರೋಧ ಇದ್ದಲ್ಲಿ ಹರಳಿನ ತೈಲದಿಂದ ಸುಧಾರಿಸಿಕೊಳ್ಳಿರಿ. ನಂತರ ನೆಲತಾಳಿ ಗಡ್ಡೆ ಅರ್ಧ ತೊಲ, ಶುಂಠಿ, ಕೊತ್ತುಂಬರಿ, ಸ[illegible] ಮೆಣಸು ಪ್ರತಿಯೊಂದು 1/4 ತೊಲ ಕುಟ್ಟಿ ಪುಡಿಮಾಡಿ. ನೀರು ನಾಲ್ಕು ಕುಡ್ತೆ ಬತ್ತಿಸಿ ಒಂದು ಕುಡ್ತೆಗಿಳಿಸಿ ಬೆಳಿಗ್ಗೆ ಅರ್ಧ ಕುಡ್ತೆ ರಾತ್ರಿ ಅರ್ಧ ಕುಡ್ತೆಯಂತೆ ಕೆಲವು ದಿವಸಗಳ ವರೆಗೆ ಸೇವಿಸುವುದರಿಂದ ಕ್ಷೇಮಕರ.

ಬಿ. ಯುಸ್. ಯುನ್.

ಪ್ರಶ್ನೆ:— ನನಗೆ ಬಾಲ್ಯದಲ್ಲಿ ಹಸ್ತಪ್ರಯೋಗ ದುಶ್ಚಟವಿತ್ತು. ಈಗ 30 ವರ್ಷ ಪ್ರಾಯ. 21ನೇ ವಯಸ್ಸಿನಿಂದ ಈ ಚಟವನ್ನು ಬಿಟ್ಟಿದ್ದೆ. ಅಂದಿನಿಂದ ದಿನೇ ದಿನೇ ಕ್ಷೀಣವಾಗುತ್ತಾ ಬಂದೆ. ವಾರದಲ್ಲಿ ಒಂದೆರಡು ಸಲ ನಿದ್ರೆಯಲ್ಲಿ ವೀರ್ಯಸ್ಖಲನವಾಗಲು ಪ್ರಾರಂಭವಾಯಿತು. ಬಹಳ ನಿಶ್ಶಕ್ತಿ, ನಿದ್ರಾನಾಶ, ಅಗ್ನಿಮಾಂದ್ಯ, ಮಲಬದ್ಧತೆ. ಕೈಕಾಲುಗಳು ಬಚ್ಚುವುದು, ಮನಸ್ಸಿನ ದೌರ್ಬಲ್ಯ ಮತ್ತು ಚಾಂಚಲ್ಯ ಮುಂತಾದ ದುಷ್ಪರಿಣಾಮಗಳನ್ನು ಕಳೆದ ಏಳೆಂಟು ವರ್ಷಗಳಿಂದ ಅನುಭವಿಸಿ ಜೀವನವೇ ಬೇಸರವೆನಿಸಿದೆ. ಆಹಾರ, ವಿಹಾರಗಳಲ್ಲಿ ಜಾಗ್ರತೆಯಿಂದ ಇದ್ದು ಕೆಲವು ಔಷಧಗಳನ್ನು ಸೇವಿಸಿ ನೋಡಿದೆ. ಏನೂ ಪ್ರಯೋಜನವಿಲ್ಲ. ಈಗ ನನಗೆ ನಿಶ್ಶಕ್ತಿ ಮತ್ತು ದೇಹ ಕ್ಷೀಣತೆಯಿಂದಾಗಿ ಸರಿಯಾಗಿ ಒಂದು ಮೈಲು ಕೂಡ ನಡೆಯಲು ಶಕ್ತಿಯಿಲ್ಲ. ವಿಶೇಷವಾದ ಬೇರೇನೂ ಕಾಯಿಲೆ ಇಲ್ಲ. ನನಗಾಗುವ ಸ್ವಪ್ನಸ್ಖಲನವನ್ನು ನಿಲ್ಲಿಸಲು ಸಾಧ್ಯವೇ? ಏನು ಚಿಕಿತ್ಸೆ ಮಾಡಬೇಕು? ಅ[illegible]ವಾದರೂ ತಿಳಿಸಿರಿ.

ಉತ್ತರ:- ನಿಮ್ಮ ಚರಿತ್ರೆಯು ಚೆನ್ನಾಗಿ ತಿಳಿಯಿತು. ಇದು ಈಗಿನ ಕಾಲದಲ್ಲಿ ನೂರಕ್ಕೆ ೫೦ರಷ್ಟು ಇದ್ದದ್ದೆ. ಈಗಾಗಲೇ ಇಂಥಾ ಹಲವಾರು ಪತ್ರಗಳೂ ನಮಗೆ ಬಂಧಿರುವವು. ಈ ಬಗ್ಗೆ ನೀವು ಚಿಂತಿಸಬೇಕಾಗಿಲ್ಲ. ನಿಮ್ಮ ದೇಹದ ಭಾರ [ತೂಕ] ಎಷ್ಟು? ಮದುವೆ ಆಗಿದೆಯೋ? ಇಲ್ಲವೋ? ಎಂಬುದನ್ನು ಪೂರ್ತಾ ವಿವರ ತಿಳಿಸಿರಿ. ನಂತರ ತಕ್ಕದಾದ ಔಷಧ ತಿಳಿಸುತ್ತೇವೆ. ಆದರೆ ನಿಮ್ಮ ಕಾಯಿಲೆಯು ಸುಲಭ ಔಷಧಿಯಿಂದ ಕೂಡಲೇ ಗುಣಪಡಿಸುವುದು ಅಸಾಧ್ಯ. ರಸೌಷಧಿಯುಲ್ಲದೆ ಹತೋಟಿಗೆ ಬರಲಾರದು. ಕಠಿಣ ಪಥ್ಯದಿಂದ 48 ದಿವಸ ರಸೌಷಧಿಯನ್ನು ತೆಗೆದುಕೊಳ್ಳಬೇಕಾದೀತು. ಇದು ಸಾಧ್ಯವೋ ಎಂಬುದನ್ನು ಸಹ ತಿಳಿಸಿರಿ.

ಪ್ರಶ್ನೆ:— ಎರಡೂ ಕಿವಿಗಳಲ್ಲಿ ಬಹಳ ತುರಿಸುತ್ತದೆ ಮತ್ತು ಒಂದು ತರದ ದ್ರವ್ಯ ಹುಟ್ಟುತ್ತದೆ. ಇದಕ್ಕೆ ಯಾವ ಎಣ್ಣೆಯನ್ನು ಹಾಕಬೇಕು? ಮನೆಯಲ್ಲಿಯೇ ತಯಾರಿಸಬಹುದಾದ ಒಂದು ಸುಲಭ ಎಣ್ಣೆಯ ಯೋಗವನ್ನು ತಿಳಿಸಿರಿ.

ಉತ್ತರ:- ಕಾಮುಕಸ್ತೂರಿ ಸೊಪ್ಪಿನ ರಸ ೧ ತೊಲ ತೆಂಗಿನ ಎಣ್ಣೆ ಎರಡು ಕುಡ್ತೆಗೆ ಅರ್ಧ ತೊಲ ಜೀರಿಗೆ ಪುಡಿಮಾಡಿ ಹಾಕಿ ಕಾಯಿಸಿ ಇಳಿಸಿ ಸ್ವಲ್ಪ ಸ್ವಲ್ಪ ಎರಡೂ ಕಿವಿಗಳಿಗೂ ಕೆಲವು ದಿವಸಗಳ ವರೇಗೆ ಬಿಡುತ್ತಾ ಬಂದರೆ ಲಾಭಕರ.

ಯು. ಪಿ. ಆರ್. ಯು.

ಪ್ರಶ್ನೆ:— ನಮ್ಮಲ್ಲಿ 22 ವರ್ಷದ ಸ್ತ್ರೀಗೆ "ಹಿಸ್ಟೀರಿಯಾ" ಸ್ವಲ್ಪ ಕಠಿಣವೇ ಎನ್ನಬಹುದು. ನಿದ್ರಾನಾಶ, ಹೆಚ್ಚು ಕೋಪ, ಮಾತನಾಡುವುದು ಅಧಿಕ ಇತ್ಯಾದಿ ಅದಕ್ಕೆ ಸಂಬಂಧಪಟ್ಟ ಉಪದ್ರವಗಳು ಅನೇಕವಿವೆ. ತೈಲ, ಮಾತ್ರೆ, ಧಾರಾಚಿಕಿತ್ಸೆಗಳ ಪ್ರಯೋಗದಿಂದ ಹತೋಟಿಗೆ ಬರಲಿಲ್ಲ. ಇದು ಪೂರ್ಣ ಕ್ಷೇಮವಾಗದೆ ವಿವಾಹ ಮಾಡಲು ಕಷ್ಟ. ಇದಕ್ಕೇನಾದರೂ ಪ್ರಯೋಗಗಳನ್ನು ತಿಳಿಸಿದರೆ ತುಂಬಾ ಉಪಕಾರ.

ಉತ್ತರ:- ಗರುಡಪಾತಾಳ ಬೇರು ತೊಲ 4 ಇದನ್ನು ಸಣ್ಣ ಸಣ್ಣದಾಗಿ ಕತ್ತರಿಸಿ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಒಳ್ಳೆ ಪುಡಿಮಾಡಿ ವಸ್ತ್ರದಿಂದ ಗಾಳಿಸಿದ ಈ ಪುಡಿಯನ್ನು ಬಾಟ್ಲಿಯಲ್ಲಿ ಹಾಕಿ ಭದ್ರವಾಗಿರಿಸಬೇಕು. ಇದನ್ನು ರಾತ್ರೆ ⅛ ತೊಲೆಯಷ್ಟನ್ನು ಒಂದು ಕುಡ್ತೆ ಕಾಯಿಸಿದ ಹಾಲಿಗೆ ಹಾಕಿ ಕುಡಿಸುವುದು. ಈ ರೀತಿ ಕೆಲವು ದಿವಸ ಕೊಡುವುದರಿಂದ ಸುಖ

ತಿನ್ನಿ ಬರುವುದು. [illegible] 400 [illegible] 50 [illegible] 2 [illegible]
ಉಪದ್ರವ ಬರಲಾರದು.

ಯು. ಜಿ. ಆರ್.

ಪ್ರಶ್ನೆ.— ಗರ್ಭನಿರೋಧಕ್ಕೆ ಸುಲಭ ಔಷಧ ತಿಳಿಸಬಹುದೇ? ಕೆಲವು ಜಾಹಿರಾತು ಓದಿದೆ. ನಂಬಿಕೆ ಬರುವುದಿಲ್ಲ. ಸ್ವತಃ ನೀವೇ ತಿಳಿಸು ಕೊಳ್ಳುವ ಔಷಧದಲ್ಲಿ ವಿಶ್ವಾಸವುಳ್ಳವನು.

ಉತ್ತರ:- ಪಲಾಶ ಪುಷ್ಪದ ಸ್ವರಸ ಒಂದು ಕಾತ್ತೆ ತಯಾರಿಸಿ ನಮಗೆ ಕಳುಹಿಸಿರಿ. ಅದರಿಂದ ಒಂದು ಔಷಧ ತಯಾರಿಸಿ ಮುದ್ರಿಸಿ ಕಳುಹಿಸುತ್ತೇವೆ. ಕಳುಹಿಸುವ ಟಪಾಲು ಖರ್ಚಿನ ಬಗ್ಗೆ ೦-೩-೦ ಸ್ಟ್ಯಾಂಪು ಮಾತ್ರ ಕಳುಹಿಸುವುದು.

ಸಾದರ ಸ್ವೀಕಾರ

ಕರ್ಮವೀರ:—ಹಿಂದುಸ್ಥಾನ ಸರಕಾರದ ಆಕಾಶವಾಣಿ ಮತ್ತು ಸುದ್ದಿ ಖಾತೆಯ ಮಾನ್ಯ ಮಂತ್ರಿಗಳಾದ ರಂಗರಾವ್ ದಿವಾಕರರು ಸ್ಥಾಪಿಸಿದ್ದು. ಶ್ರೀ ಹ. ರಾ. ಪುರೋಹಿತರ ಸಂಪಾದಕತ್ವದಲ್ಲಿ ಕನ್ನಡ ನಾಡಿನ ಸಾಹಿತ್ಯ ಹಾಗೂ ಜನಜೀವನವನ್ನು ಬೆಳೆಸಲು ಹವಣಿಸುವದೇ ಹುಬ್ಬಳ್ಳಿ ಯಿಂದ ಹೊರಡುತ್ತಿದ್ದು ಉತ್ತಮ ಲೇಖಗಳು ಇದರಲ್ಲಿ ತಪ್ಪದೇ ಬರುತ್ತಿದ್ದು ಕನ್ನಡ ಹರಿಜನವೆಂದರೂ ಒಪ್ಪುವ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಬೆಲೆ ೦-೩-೦

ಸಾಧನ:-ಹೊನ್ನಾವರದಿಂದ ಹೊರಡುತ್ತಿರುವ ಕನ್ನಡ ಪಕ್ಷ ಪತ್ರಿಕೆ. ಸಂಪಾದಕರು. ಹಾಗೂ ಪ್ರಕಾಶಕರು ಶ್ರೀ ಗಣಪತಿ ಶಂಕರ ಭಟ್ಟ, ಸಮಾಚಾರ ಕರ್ತರವರು ಸಹಸಂಪಾದಕರು. ಶ್ರೀ ವಿಶ್ವೇಶ್ವರ ಶರ್ಮಾ ತಪ್ಪಲಿನ ಮತ್ತು ಶ್ರೀ ಶಂಭು ಶಾಸ್ತ್ರಿ ನಾಜಗಾರ. ೨೬ ಪುಟಗಳು.

ವಾರ್ಷಿಕ ಚಂದಾ ವರ್ಗಣಿ ರೂ. ೩-೮-೦. ಬಿಡಿ ಸಂಚಿಕೆ ೦-೩-೬

ವಾರ್ತಾ ವಿಹಾರ

ಮುಂಬಾಯಿ ಪ್ರಾಂತ್ಯದಲ್ಲಿ ಸರಕಾರದಿಂದ ಮನ್ನಣೆ ಪಡೆದ ಆಯುರ್ವೇದ ಕಾಲೇಜ ಸ್ಥಾಪಿಸುವ ಧೋರಣೆಯಿದ್ದು ಆ ಬಗ್ಗೆ ಆಯುರ್ವೇದ ಸಂಸ್ಥೆಗಳ ಕಾರ್ಯ ಪರಿಶೀಲನೆಗಾಗಿ ಆರೋಗ್ಯ ಮಂತ್ರಿ **ಡಾ॥ ಗಿಲ್ಡರರು** ಈಗಾಗಲೇ ಜಾಮನಗರಕ್ಕೆ ತೆರಳಿ ಅಲ್ಲಿಯ ಸಂಶೋಧನಾ ಸಂಸ್ಥೆಯ ಪರಿಶೀಲನೆ ನಡೆಸಿದರಂತೆ.

ನಿ. ಕ. ಆಯುರ್ವೇದ ಮಂಡಳದ ಸ್ಥಾಯೀ ಸಮಿತಿಯ ವಿಶೇಷಾಧಿವೇಶನವು ತಾ. ೧೦–೬–೪೯ರಲ್ಲಿ ಬೆಳಗಾವಿಯಲ್ಲಿ ಕೂಡಿದ್ದು ಈ ಕೆಳಗಿನ ಗೊತ್ತುವಳಿಗಳನ್ನು ಸ್ವೀಕರಿಸಿತು

ಬರಲಿರುವ ಮುಂಬಾಯಿ ದೇಶೀಯ ವೈದ್ಯಕ ಬೋರ್ಡಿನ ಚುನಾವಣೆಯಲ್ಲಿ ನಿ. ಕ. ಆ. ಮಂಡಳವು ಭಾಗ ತೆಗೆದುಕೊಳ್ಳಬೇಕು. ಚುನಾವಣೆಗೆ ಯಾವ ತರದಿಂದಲೂ ಬಹಿಷ್ಕಾರ ಹಾಕಬಾರದು ಹಾಗೂ ಚುನಾವಣೆಯ ಸಲುವಾಗಿ ನೇಮಿಸತಕ್ಕ ಬೋರ್ಡಿಗೆ ಇಬ್ಬರು ಸದಸ್ಯರನ್ನು ಆರಿಸಿ ಕೊಡಬೇಕು.

ಚುನಾವಣೆಯ ಸಲುವಾಗಿ ನೇಮಿಸತಕ್ಕ ಸಿವ್ಹಿಕ್ ಬೋರ್ಡಿಗೆ (೧) ವೈದ್ಯ ಎಸ್.ಆರ್. ಹಿರೇಮಠ, ವಿಜಾಪೂರ. (೨) ವೈದ್ಯ ಜಿ. ಬಿ. ಸವಣೂರು, ಹುಬ್ಬಳ್ಳಿ, ಇವರನ್ನು ಆರಿಸತಕ್ಕದ್ದು. ಬೋರ್ಡಿನ ಚುನಾವಣೆಗೆ ವೈದ್ಯ ದಾ. ಅ. ಹಲಸೀಕರ ಮತ್ತು ವೈದ್ಯ ಎ. ವಿ. ಗದಗ, ಇವರಿಬ್ಬರ ಹೆಸರುಗಳನ್ನು ಸೂಚಿಸಲಾಯಿತು

ಮುಂಬಯಿ ಸರಕಾರದವರು ಆಯುರ್ವೇದದ ಬಗ್ಗೆ ಸಂಶೋಧನೆ ನಡಿಸಲು 1 ಸಮಿತಿಯನ್ನು ನೇಮಿಸಿರುವದು ಈ ಸಭೆಯ ಗಮನಕ್ಕೆ ಬಂದಿದೆ. ಆ ಸಮಿತಿಯಲ್ಲಿ ಕನ್ನಡಿಗರೊಬ್ಬರೂ ಇಲ್ಲದಿರುವುದನ್ನು ಈ ಸಭೆಯು ತೀವ್ರವಾಗಿ ನಿಷೇಧಿಸುತ್ತದೆ.

Regd. No. M. 5276 JULY 1949. Kannada Monthly

Printed by:- P. R. Bhat at Shri Radhakantha Press, Mulki, S. K.
Edited & Published by:- K. R. Puranik, at Hiriadka.